# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಗುರುವಾರ, ಮಾರ್ಚ್ 10, 2022

ಸಂಪುಟ : 48 ಸಂಚಿಕೆ : 299 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com




ಭತ್ತವನ್ನು ನುಂಗುತ್ತಿರುವ ಅಡಿಕೆ...

ಭದ್ರಾ ಜಲಾಶಯದಿಂದ ನೀರು ಬರಲು ಪ್ರಾರಂಭವಾದಾಗಿನಿಂದ ದಾವಣಗೆರೆ ಜಿಲ್ಲೆಯಾದ್ಯಂತ ಭತ್ತದ ಹಸಿರಿನ ಸಿರಿ ಹೊಮ್ಮಿತ್ತು. ರಾಜ್ಯದಲ್ಲಿ ಪ್ರಮುಖ ಆಹಾರವಾದ ಭತ್ತವನ್ನು ಸಾವಿರಾರು ಎಕರೆ ಜಾಗದಲ್ಲಿ ಬೆಳೆಸಲಾಗುತ್ತಿತ್ತು. ಆದರೆ ಭತ್ತದ ಜಾಗವನ್ನು ಅಡಿಕೆ ಅಕ್ರಮಿಸಿದೆ. ಎಲ್ಲಿ ನೋಡಿದರಲ್ಲಿ ಅಡಿಕೆ ಸಸಿಗಳನ್ನು ನೆಡಲಾಗಿದೆ. ಅಡಿಕೆಯ ಬೆಲೆ ಹೆಚ್ಚಾಗುತ್ತಿರುವುದು, ನಿರ್ವಹಣೆ ಕಡಿಮೆಯಿರುವುದು ಮತ್ತು ಎಷ್ಟು ಸಮಯವಿಟ್ಟರು ಹಾಳಾಗದಿರುವುದು ಪ್ರಮುಖ ಕಾರಣ. ಉಳಿದಂತೆ ಎಲ್ಲಾ ಹಣ್ಣು-ತರಕಾರಿಗಳ ಜಾಗವನ್ನು ಅಡಿಕೆ ಅತಿಕ್ರಮಿಸುತ್ತಿದೆ. ಗಗನಕ್ಕೇರಿದ್ದ ಟೊಮ್ಯಾಟೊ ಬೆಲೆ ಪಾತಾಳಕ್ಕಿಳಿರುವುದು ಸೇರಿದಂತೆ, ಕೆಲಸಗಾರರ ಕೊರತೆ, ನಿಗದಿತ ಬೆಲೆ ಇಲ್ಲದೆ ಇರುವುದು ಮುಂತಾದ ಕಾರಣಗಳಿಂದ ಆಹಾರ ಧಾನ್ಯ ಉತ್ಪಾದನೆಯಿಂದ ರೈತರು ವಿಮುಖರಾಗುತ್ತಿದ್ದಾರೆ. ಅನ್ನ ತಿಂದು ಬದುಕುವ ಜನರಿಗೆ ಗುಟ್ಕಾ ಆಹಾರವಾದೀತೆ? ಆಹಾರ ಬೆಳೆಗಾರರ ಹಿತರಕ್ಷಣೆ ಅಗತ್ಯ. ಇಲ್ಲದಿದ್ದರೆ ಅಡಿಕೆಯಿಂದ ಬಂದ ಹಣ ಅಪೌಷ್ಟಿಕತೆ ಮತ್ತು ರೋಗ ನಿವಾರಣೆಗೆ ಉಪಯೋಗಿಸಬೇಕಾಗಬಹುದು.

ಚಿತ್ರ-ಬರಹ : ಡಾ. ಎಸ್. ಶಿಶುಪಾಲ ಪ್ರಾಧ್ಯಾಪಕರು, ದಾ.ವಿ.ವಿ.

# ಗರಿಗೆದರಲಿರುವ ರಾಜ್ಯ ರಾಜಕೀಯ ಚಟುವಟಿಕೆ

**ಉತ್ತರ ಪ್ರದೇಶದಲ್ಲಿ ಬಿಜೆಪಿ ಮತ್ತೆ ಅಧಿಕಾರದ ಚುಕ್ಕಾಣಿ ಹಿಡಿದರೆ ಕರ್ನಾಟಕದಲ್ಲೂ ಕೆಲವು ಬದಲಾವಣೆಗಳಿಗೆ ಪಕ್ಷದ ವರಿಷ್ಠರು ಮುಂದಾಗಲಿದ್ದಾರೆ.**

ಬೆಂಗಳೂರು, ಮಾ. 9- ಉತ್ತರ ಪ್ರದೇಶ ಸೇರಿದಂತೆ ಐದು ರಾಜ್ಯಗಳ ವಿಧಾನಸಭಾ ಚುನಾವಣೆ ಫಲಿತಾಂಶದ ನಂತರ ಕರ್ನಾಟಕದಲ್ಲಿನ ಆಡಳಿತಾರೂಢ ಬಿಜೆಪಿಯಲ್ಲಿ ಬಿರುಸಿನ ರಾಜಕೀಯ ಚುಟುವಟಿಕೆಗಳು ಗರಿಗೆದರಲಿವೆ.

ಪಂಚ ರಾಜ್ಯಗಳ ವಿಧಾನಸಭೆಗಳಿಗೆ ನಡೆದ ಚುನಾವಣಾ ಫಲಿತಾಂಶ ನಾಳೆ ಮಧ್ಯಾಹ್ನದ ವೇಳೆಗೆ ಪ್ರಕಟಗೊಳ್ಳಲಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ ಮಂತ್ರಿಮಂಡಲ ವಿಸ್ತರಣೆ ಇಲ್ಲವೇ ಪುನರ್ ರಚನೆ ಮಾಡುವ ಉದ್ದೇಶದಿಂದ ದೆಹಲಿಗೆ ಭೇಟಿ ಕೊಟ್ಟಿದ್ದರೂ, ವರಿಷ್ಠರ ಭೇಟಿ ಸಾಧ್ಯವಾಗಿರಲಿಲ್ಲ, ಅಷ್ಟೇ ಅಲ್ಲದೆ, ಪ್ರಧಾನಿ ಅವರ ಕಾರ್ಯಾಲಯವೂ ಇವರ ಬೇಡಿಕೆಗಳಿಗೆ ಸ್ಪಂದಿಸಿರಲಿಲ್ಲ.

ರಾಜ್ಯ ವಿಧಾನಸಭಾ ಚುನಾವಣೆಗೆ ಕೇವಲ 13 ತಿಂಗಳು ಮಾತ್ರ ಬಾಕಿ ಇದ್ದು, ಮತ್ತೆ ಪಕ್ಷವನ್ನು ಅಧಿಕಾರಕ್ಕೆ ತರಬೇಕೆಂದು ಬಿಜೆಪಿ ವರಿಷ್ಠರು ಬೊಮ್ಮಾಯಿ ಆಡಳಿತದಲ್ಲಿ ಹಾಗೂ ಪಕ್ಷದ ಸಂಘಟನೆಯಲ್ಲೂ ಕೆಲವು ಬದಲಾವಣೆ ಮಾಡುವ ಇಚ್ಛೆ ಹೊಂದಿದ್ದಾರೆ.

ಯಾವ ರೀತಿಯ ಬದಲಾವಣೆ ಎಂಬುದು ಇಲ್ಲಿನ ನಾಯಕರಿಗೂ ತಿಳಿದಿಲ್ಲ, ಆದರೆ ಆಡಳಿತ ಪಕ್ಷದ ಕೆಲವು ಶಾಸಕರು ಮತ್ತು ನಾಯಕರು ನಾಯಕತ್ವ ಬದಲಾವಣೆ ಆಗುತ್ತದೆ, ಮುಂದೆ ಇಂತಹವರೇ ಮುಖ್ಯಮಂತ್ರಿ ಆಗುತ್ತಾರೆ ಎಂಬ ಚರ್ಚೆಯಲ್ಲಿ ನಿರತರಾಗಿದ್ದಾರೆ.

ಇದೇ ಕಾರಣಕ್ಕಾಗಿ ಸಂಪುಟ ವಿಸ್ತರಣೆ ಅಥವಾ ಪುನರ್ ರಚನೆಗೂ ಅವಕಾಶ ಮಾಡಿಲ್ಲ. ಉತ್ತರ ಪ್ರದೇಶದಲ್ಲಿ ಮತ್ತೆ ಅಧಿಕಾರ ಹಿಡಿದರೆ, ವರಿಷ್ಠರು ರಾಜ್ಯದ ಮಟ್ಟಿಗೆ ಕೆಲವು ಕಠಿಣ ತೀರ್ಮಾನಗಳನ್ನು ತೆಗೆದುಕೊಳ್ಳಬಹುದೆಂದು ಬಿಜೆಪಿ ಅಂಗಳದಲ್ಲಿ ಕೇಳಿಬರುತ್ತಿದೆ.

ಮುಖ್ಯಮಂತ್ರಿ ಸೇರಿದಂತೆ ಬಿಜೆಪಿಯ ಬಹುತೇಕ ನಾಯಕರು ಪಂಚ ರಾಜ್ಯಗಳ ಚುನಾವಣಾ ಫಲಿತಾಂಶವನ್ನೇ ಕಾಯುತ್ತಿದ್ದಾರೆ.

ಬಹಳ ದಿನಗಳಿಂದಲೂ ಗೊಂದಲದಲ್ಲಿರುವ ಈ ನಾಯಕರಿಗೆ ನಾಳೆಯ ನಂತರ ರಾಜ್ಯ (2ನೇ ಪುಟಕ್ಕೆ)

# 3 ಲಕ್ಷ ಟನ್ ರಾಗಿ ಖರೀದಿ : ಅನುಮತಿ ಕೋರಿ ಕೇಂದ್ರಕ್ಕೆ ಪತ್ರ

ಬೆಂಗಳೂರು, ಮಾ. 9- 20 ಮೂರು ಲಕ್ಷ ಟನ್ ರಾಗಿ ಖರೀದಿಗಾಗಿ ಅನುಮತಿ ಕೋರಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ವಿಧಾನಸಭೆಗೆ ಇಂದು ತಿಳಿಸಿದರು.

ಶೂನ್ಯ ವೇಳೆಯಲ್ಲಿ ಗೂಳಿಹಟ್ಟಿ ಶೇಖರ್ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಕಳೆದ ಜನವರಿ 29 ರಂದು ಮೂರು ಲಕ್ಷ ಟನ್ ರಾಗಿ ಖರೀದಿಗೆ ಅನುಮತಿ ನೀಡುವಂತೆ ಎಫ್‌ಸಿಐಗೆ ಪತ್ರ ಬರೆಯಲಾಗಿದೆ. ಅನುಮತಿ ಸಿಕ್ಕ ಕೂಡಲೇ ರಾಗಿ ಖರೀದಿ ಆರಂಭಿಸಲಾಗುವುದು ಎಂದರು.

2021-22ನೇ ಸಾಲಿನಲ್ಲಿ 2.10 ಮೆಟ್ರಿಕ್ ಟನ್ ಖರೀದಿಗೆ ಅನುಮತಿ ನೀಡಿತ್ತು. ಈಗಾಗಲೇ ಈ ಪ್ರಮಾಣದ ರಾಗಿ ಖರೀದಿ ಮಾಡಲಾಗಿದೆ. ಉತ್ತಮ ಬೆಳೆ ಬಂದಿದ್ದರಿಂದ ಇನ್ನೂ (3ನೇ ಪುಟಕ್ಕೆ)

# ಮಹಿಳೆಯರಿಗೆ ಬೇಕು ಶೇ.40 ಮೀಸಲಾತಿ

## ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾಜಿ ಸಚಿವೆ ನಾಗಮ್ಮ ಕೇಶವಮೂರ್ತಿ

ದಾವಣಗೆರೆ, ಮಾ.9- ಪ್ರಸ್ತುತ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ನೀಡಲಾಗುತ್ತಿದ್ದು, ಶೇ.40ಕ್ಕೆ ಹೆಚ್ಚಿಸುವ ಅಗತ್ಯವಿದೆ ಎಂದು ಮಾಜಿ ಸಚಿವೆ ಶ್ರೀಮತಿ ನಾಗಮ್ಮ ಕೇಶವಮೂರ್ತಿ ಹೇಳಿದರು.

ವನಿತಾ ಸಮಾಜದಿಂದ ನಗರದ ಪಿ.ಜೆ. ಬಡಾವಣೆಯಲ್ಲಿನ ಸತ್ಯಸಾಯಿ ರಂಗ ಮಂದಿರದಲ್ಲಿ ಬುಧವಾರ ಸಂಜೆ ಹಮ್ಮಿಕೊಂಡಿದ್ದ ಅಂತರ್ ರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ವನಿತಾ ಸಮಾಜದ ವಾರ್ಷಿಕೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಹಿಳೆಯರು ಮೀಸಲಾತಿ ಪಡೆದ ನಂತರ ಪ್ರತಿಯೊಂದು ಕ್ಷೇತ್ರದಲ್ಲೂ ಪ್ರಗತಿ ಸಾಧಿಸುತ್ತಿದ್ದಾರೆ. ಇದು ಉತ್ತಮ ಪರಿವರ್ತನೆ. ಆದರೂ ಇನ್ನೂ ಸಾಕಷ್ಟು ಬದಲಾವಣೆಗಳಾಗಬೇಕಿದೆ ಎಂದು ಹೇಳಿದರು.

ಮಹಿಳಾ ದಿನಾಚರಣೆ ಆರಂಭವಾದಾಗ ಅದು ಕೇವಲ ನಾಮಕಾವಸ್ತೆಗೆ ಎಂಬಂತಿತ್ತು.





ಶ್ರೀಮತಿ ಸುನಿತಾ ವೀರನಾರಾಯಣ ಅವರಿಗೆ 'ವನಿತಾ ಸೇವಾ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಭಾಷಣ ಮಾಡುವುದು. ಹಕ್ಕುಗಳನ್ನು ಕೇಳುವುದಕ್ಕೆ ಸೀಮಿತವಾಗಿತ್ತು. ಆದರೆ ನಾನು ಸೇರಿದಂತೆ ಹತ್ತು ಮಹಿಳಾ ಶಾಸಕರು ಮುಖ್ಯಮಂತ್ರಿ ದೇವರಾಜ ಅರಸು ಅವರನ್ನು ಭೇಟಿ ಮಾಡಿ, ಪ್ರತ್ಯೇಕ ಇಲಾಖೆಗೆ ಬೇಡಿಕೆ ಇಟ್ಟಾಗ ಅವರು ಸ್ಪಂದಿಸಿದರು ಎಂದು ನೆನಪಿಸಿಕೊಂಡರು. ಆರಂಭದಲ್ಲಿ ಶೇ.20 ರಷ್ಟಿದ್ದ ಮೀಸಲಾತಿ ನಂತರ ಶೇ.25, ಶೇ.30 ಇದೀಗ ಶೇ.33ರಷ್ಟಿದೆ. ಈಗ ಶೇ.40ಕ್ಕೆ ಹೆಚ್ಚಿಸಬೇಕೆಂದು ಮನವಿ ಮಾಡಿ ದ್ದೇವೆ. ಮುಖ್ಯಮಂತ್ರಿಗಳು ತೆಗೆದುಕೊಳ್ಳುವ ನಿರ್ಧಾರದ ಮೇಲೆ ಅವಲಂಬಿಸಿದೆ ಎಂದು ಹೇಳಿದರು.

ನಾನು ರಾಜಕಾರಣದ ಸಭೆಗಳಿಗೆ ಹಳ್ಳಿಗಳಿಗೆ ತೆರಳುತ್ತಿದ್ದಾಗ (3ನೇ ಪುಟಕ್ಕೆ)

# ವಾಲ್ಮೀಕಿ ಶ್ರೀಗಳ ಧರಣಿ ಸತ್ಯಾಗ್ರಹಕ್ಕೆ ಎಸ್ಸೆಸ್ ಬೆಂಬಲ



**ಎಸ್ಟಿ ಮೀಸಲಾತಿ ಹೆಚ್ಚಳ ಮುಂದಾದರೂ ಮಾಡಲೇಬೇಕು, ಅದನ್ನು ಇಂದೇ ಮಾಡಿ, ಸರ್ಕಾರ ಕೀರ್ತಿಯನ್ನು ಹೆಚ್ಚಿಸಿಕೊಳ್ಳಲಿ : ಎಸ್ಸೆಸ್**

ಬೆಂಗಳೂರು, ಮಾ.9- ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅಪೇಕ್ಷೆಯಂತೆ ಬೇಡಿಕೆಗಳನ್ನು ತತ್‌ಕ್ಷಣವೇ ಈಡೇರಿಸುವಂತೆ ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ಸರ್ಕಾರವನ್ನು ಆಗ್ರಹಿಸಿದ್ದಾರೆ.

ನಿವೃತ್ತ ನ್ಯಾಯಾಧೀಶರಾದ ನಾಗಮೋಹನ್ ದಾಸ್ ಆಯೋಗದ ವರದಿ (ಎಸ್ಸಿ-ಎಸ್ಟಿ ಮೀಸಲಾತಿ ಹೆಚ್ಚಳ) ಅನುಷ್ಠಾನಕ್ಕೆ ಒತ್ತಾಯಿಸಿ, ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಫ್ರೀಡಂ ಪಾರ್ಕ್‌ನಲ್ಲಿ ನಡೆಸುತ್ತಿರುವ ಅಹೋರಾತ್ರಿ ಧರಣಿ ಸತ್ಯಾಗ್ರಹ ಶಿಬಿರಕ್ಕೆ ಇಂದು ಭೇಟಿ ನೀಡಿದ್ದ ಸಂದರ್ಭದಲ್ಲಿ ಅವರು ಮಾತನಾಡಿದರು.

ಎಸ್ಟಿ ಮೀಸಲಾತಿ ಹೆಚ್ಚಿಸುವುದು ಮುಂದಿನ ದಿನಗಳಲ್ಲಾದರೂ ಮಾಡಲೇಬೇಕು. ಅದನ್ನು ಇಂದೇ ಮಾಡುವುದರ ಮೂಲಕ ಶ್ರೀಗಳ ಮತ್ತು ಸಮಾಜದ ಪ್ರೀತಿ, ವಿಶ್ವಾಸ ಗಳಿಸುವುದರ ಮೂಲಕ ಕೀರ್ತಿಯನ್ನು ಹೆಚ್ಚಿಸಿಕೊಳ್ಳಲಿ ಎಂದು ಎಸ್ಸೆಸ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಕಿವಿಮಾತು ಹೇಳಿದರು. ಶ್ರೀಗಳು 28 ದಿನಗಳಿಂದ ಅಹೋರಾತ್ರಿ ಧರಣಿ ಸತ್ಯಾಗ್ರಹ ನಡೆಸುತ್ತಿದ್ದರೂ ಸರ್ಕಾರ ಸ್ಪಂದಿಸದಿರುವ ಬಗ್ಗೆ ವ್ಯಾಕುಲತೆ ವ್ಯಕ್ತಪಡಿಸಿದ ಅವರು, ಸರ್ಕಾರ ಈ ಕೂಡಲೇ ಕಣ್ಣು ತೆರೆಸಬೇಕು ಎಂದು (4ನೇ ಪುಟಕ್ಕೆ)

# ತ್ರಿವರ್ಣ ಧ್ವಜ ನಮ್ಮನ್ನು ಗಡಿ ದಾಟಿಸಿತು

## ಉಕ್ರೇನ್‌ನಿಂದ ತವರಿಗೆ ಮರಳಿದ ವಿದ್ಯಾರ್ಥಿ ಆದರ್ಶನ ಭಾವುಕ ನುಡಿ

ಜಗಳೂರು, ಮಾ.9- ಯುದ್ದ ಪೀಡಿತ ಉಕ್ರೇನ್ ದೇಶದ ಹಾರ್ಕಿವ್ ನಗರದಲ್ಲಿ ಸಿಲುಕಿದ್ದ ತಾಲ್ಲೂಕಿನ ಸೊಕ್ಕೆ ಗ್ರಾಮದ ವೈದ್ಯಕೀಯ ವಿದ್ಯಾರ್ಥಿ ಎಸ್.ಆದರ್ಶ ತವರಿಗೆ ಮರಳಿದ್ದು, ಪೋಷಕರು ನಿಟ್ಟುಸಿರು ಬಿಟ್ಟಿದ್ದಾರೆ. ಬೆಂಗಳೂರು ಏರ್ ಪೋರ್ಟ್ ಬಳಿ ನಿನ್ನೆ ರಾತ್ರಿ ಶಾಸಕ ಎಸ್.ವಿ. ರಾಮ ಚಂದ್ರ ಆತ್ಮೀಯವಾಗಿ ಸ್ವಾಗತಿಸಿದರು.

ಬಂಕರ್ ನಿಂದ ಹೊರಬಂದು ಮಿಲಿಟರಿ ವಸತಿ ಗೃಹದಲ್ಲಿ ತಂಗಿದ್ದ ಆದರ್ಶ ಅವರು ಕಳೆದ ಮೂರು ದಿನಗಳ ಹಿಂದೆ ಒಪ್ಪತ್ತು ಊಟ ಮಾತ್ರ ಸೇವಿಸಿ ಸ್ವದೇಶಕ್ಕೆ ಮರಳಲು ಹರ ಸಾಹಸಪಟ್ಟಿದ್ದು. ದೇಶದ ಪ್ರಧಾನಿ ಹಾಗೂ ಮುಖ್ಯಮಂತ್ರಿಗಳ ಕಾಳಜಿ ಯಿಂದ ಸುರಕ್ಷತೆಯಿಂದ ಯಶಸ್ವಿಯಾಗಿ ಸೊಕ್ಕೆ ಗ್ರಾಮಕ್ಕೆ ತೆರಳಿದ್ದಾರೆ ಎಂದು ಶಾಸಕ



ಎಸ್.ವಿ. ರಾಮಚಂದ್ರ ತಿಳಿಸಿದರು.

**ಮೆಡಿಕಲ್ ವಿದ್ಯಾರ್ಥಿಗೆ ಭರಪೂರ ಸ್ವಾಗತ:** ಮೆಡಿಕಲ್ ವಿದ್ಯಾರ್ಥಿ ತಾಲೂಕಿಗೆ ಆಗಮಿಸುತ್ತಿದ್ದಂತೆ ಪಟ್ಟಣ ಹಾಗೂ ಗ್ರಾಮದಲ್ಲಿ ರಾಜಕೀಯ ಮುಖಂಡರುಗಳು ಗ್ರಾಮಸ್ಥರು ವಿದ್ಯಾರ್ಥಿಗೆ ಮಾಲಾರ್ಪಣೆ ಮಾಡಿ ಭರಪೂರ ಸ್ವಾಗತ ಕೋರಿದರು.

ಉಕ್ರೇನ್ ನಲ್ಲಿನ ವಾತಾವರಣ ನನಗೆ ಭಯಭೀತನನ್ನಾಗಿಸಿತ್ತು. ಎಲ್ಲೆಂದರಲ್ಲಿ ಬಾಂಬ್ ದಾಳಿಗಳು ನಡೆಯುತ್ತಿದ್ದವು. ಒಂದು ಬಂಕರ್ ಒಳಗೆ 10 ದಿನಗಳ ಕಾಲ ಉಳಿದುಕೊಂಡಿದ್ದೆವು. ಭಾರತ ದೇಶದ ತ್ರಿವರ್ಣಧ್ವಜ ನನ್ನನ್ನು ತವರಿಗೆ ಮರಳಿಸಲು ಕಾರಣವಾಯಿತು. (2ನೇ ಪುಟಕ್ಕೆ)

# ವಿದ್ಯಾನಗರದ ಎಸ್‌ಐ ಪ್ರಸಾದ್ ಅವರಿಗೆ ಮುಂಬಡ್ತಿ



ದಾವಣಗೆರೆ, ಮಾ.9- ವಿದ್ಯಾನಗರ ಪೊಲೀಸ್ ಠಾಣೆ ಸಬ್ ಇನ್‌ಸ್ಪೆಕ್ಟರ್ ಪಿ. ಪ್ರಸಾದ್ ಅವರಿಗೆ ಪೊಲೀಸ್ ಇನ್ ಸ್ಪೆಕ್ಟರ್ ಹುದ್ದೆಗೆ ಮುಂಬಡ್ತಿ ನೀಡಿ ಚಿತ್ರದುರ್ಗದ ಮಹಿಳಾ ಪೊಲೀಸ್ ಠಾಣೆಗೆ ನೇಮಕ ಮಾಡಿ ಸರ್ಕಾರ ಆದೇಶಿಸಿದೆ.

# ಸರ್ಕಾರದ ಮುಂದೆ ಸಬ್ಸಿಡಿ ಹೆಚ್ಚಳದ ಪರಿಶೀಲನೆ

ಬೆಂಗಳೂರು, ಮಾ. 9- ಸಾಮಾನ್ಯ ವರ್ಗದ ರೈತರು ಕೃಷಿ ಯಂತ್ರೋಪಕರಣಗಳನ್ನು ಖರೀದಿಸಲು ನೀಡಲಾಗುತ್ತಿರುವ ಸಬ್ಸಿಡಿ ಶೇ.50ರಿಂದ ಶೇ.75ಕ್ಕೆ ಹೆಚ್ಚಿಸುವ ಪರಿಶೀಲನೆ ಸರ್ಕಾರದ ಮುಂದಿದೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ವಿಧಾನಸಭೆ ಯಲ್ಲಿಂದು ತಿಳಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ (3ನೇ ಪುಟಕ್ಕೆ)

# 11 ತೆಂಗಿನ ಮರಗಳಿಗೆ ವಿಷ

ಹೊನ್ನಾಳಿ, ಮಾ. 9- ಜಮೀನು ಬದು ವಿವಾದ ಹಾಗೂ ತನ್ನ ಬೆಳೆ ಉತ್ತಮವಾಗಿ ಬರುವುದಿಲ್ಲ ಎಂಬ ಕ್ಷುಲ್ಲಕ ವಿಷಯಕ್ಕೆ ಸಂಬಂಧಿಸಿದಂತೆ ಪಕ್ಕದ ಜಮೀನಿನ ಬದುವಿನ ಸಾಲಿನಲ್ಲಿದ್ದ 11 ತೆಂಗಿನ ಗಿಡಗಳಿಗೆ ಬೈರಗಿ ಮೂಲಕ ಕೊರೆದು ಬಿಳಿ ಪೌಡರಿನ ವಿಷಹಾಕಿದ ಘಟನೆಗೆ ಸಂಬಂಧಿಸಿದಂತೆ ಚನ್ನಗಿರಿ ತಾಲ್ಲೂಕು ಬಸವಾಪಟ್ಟಣ ಠಾಣೆಯಲ್ಲಿಂದು ದೂರು ದಾಖಲಾಗಿದೆ.



**ಘಟನೆ ವಿವರ:** ಚನ್ನಗಿರಿ ತಾಲ್ಲೂಕು ಕತ್ತಲಗೆರೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯ 'ಕವಳಿತಾಂಡ' ದ ಸರ್ವೆ.ನಂ. 240 ರ ಎ. (2ನೇ ಪುಟಕ್ಕೆ)




ಶ್ಯಾಬನೂರಿನಲ್ಲಿ ಇಂದು ಕಂಕಣಧಾರಣೆ

ದಿನಾಂಕ 12ರ ಶನಿವಾರ ರಥೋತ್ಸವ
ದಿನಾಂಕ 13ರ ಭಾನುವಾರ ಬೆಲ್ಲದ ಬಂಡಿ
ದಿನಾಂಕ 14ರ ಸೋಮವಾರ ಓಕುಳಿ

ಸರ್ವ ಭಕ್ತಾದಿಗಳಿಗೆ ಆದರದ ಸುಸ್ವಾಗತ...

ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಕಮಿಟಿ, ಶ್ಯಾಬನೂರು.



Bapuji Educational Association (Regd.)

## Bapuji Institute of Hi-Tech Education

Davangere

BIHE is a leading educational institute in Karnataka with track record of more than 2 decades having excellent infrastructure facilities and attracts students from across Karnataka for BCA and B.Com courses.
BIHE is looking for deserving candidates to fill the following positions

### Assistant Professor

- M.Tech (CS/IS), MCA / M.Com graduates with relevant teaching experience
- Preference will be given to those candidates having higher qualification

### Librarian

- Masters in Library Science with relevant experience
- Experience in Digital Library and Library automation


### Stenographer

- Graduate in any discipline with Tally and Computer Knowledge
- Should have speed of not less than 100 wpm in English shorthand and 40 wpm in English typewriting

*Interested may send their resumes to*
principal@bihedvg.org
*within 5 days*



## 80ನೇ ಜನ್ಮದಿನದ ಹಾರ್ದಿಕ ಶುಭಾಶಯಗಳು



ಶ್ರೀ ಟಿ. ಹನುಮಂತಪ್ಪ
ಮಾಜಿ ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ರಿ.659) ಬೆಂಗಳೂರು.
ಆಡಳಿತ ಮಂಡಳಿ ಮಾಜಿ ಸದಸ್ಯರು (ಕಾರ್ಮಿಕ), ಕೆ.ಇ.ಬಿ. ಬೆಂಗಳೂರು.
ಆಡಳಿತ ಮಂಡಳಿ ಮಾಜಿ ನಿರ್ದೇಶಕರು, ಕವಿಪ್ರನಿನಿ, ಬೆಂಗಳೂರು.
ಸಂಸ್ಥಾಪಕ ಅಧ್ಯಕ್ಷರು, ದಾವಣಗೆರೆ ಮತ್ತು ಹರಿಹರ ವಿಭಾಗೀಯ ಕ.ವಿ.ಮಂ. ನೌಕರರ ಪತ್ತಿನ ಸಹಕಾರ ಸಂಘ, ದಾವಣಗೆರೆ.
(ಮೊ. : 9449144511)

ಇವರಿಗೆ 80ನೇ ಜನ್ಮ ದಿನದ ಹಾರ್ದಿಕ ಶುಭಾಶಯಗಳು.
ಶ್ರೀಯುತರಿಗೆ ಆಯುರಾರೋಗ್ಯ, ಐಶ್ವರ್ಯ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಶುಭ ಕೋರುವವರು :

ಶ್ರೀ ಕೆ.ಎಸ್. ಜಯಪ್ಪ
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ಸಿ.) ಮತ್ತು ರಾಜ್ಯ ಉಪಾಧ್ಯಕ್ಷರು, ಕವಿಮಂ, ಪಜಾ/ಪಂ ಕಲ್ಯಾಣ ಸಂಸ್ಥೆ ಮತ್ತು ಕೇಂದ್ರ ಸಮಿತಿ ಮಾಜಿ ಸದಸ್ಯರು, ಕವಿಪ್ರನಿ ನೌಕರರ ಸಂಘ (ರಿ. 659), ದಾವಣಗೆರೆ. 94483 65261

ಶ್ರೀ ಎನ್.ಹೆಚ್. ಸುರೇಶ್
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ.)
ಕೇಂದ್ರ ಸಮಿತಿ ಸದಸ್ಯರು, ಕವಿಪ್ರನಿ ನೌಕರರ ಸಂಘ (ರಿ.659) ದಾವಣಗೆರೆ. ಫೋನ್ : 70199 08818

ಶ್ರೀ ಸಿ. ನಂಜಪ್ಪ (ಕೃಷ್ಣಾ)
ಮಾಜಿ ಕಾರ್ಯದರ್ಶಿ, ಸ್ಥಳೀಯ ಸಮಿತಿ, ಕವಿಪ್ರನಿ ನೌಕರರ ಸಂಘ, (ರಿ. 659) ದಾವಣಗೆರೆ. ಫೋನ್ : 96326 22444

ಮತ್ತು ಕ.ವಿ.ಪ್ರ.ನಿ.ನಿ. ಅಧಿಕಾರಿಗಳು ಮತ್ತು ನೌಕರರ ಒಕ್ಕೂಟ, ದಾವಣಗೆರೆ.

# ಚಿಕ್ಕ ಓಬಜ್ಜಿಹಳ್ಳಿಯಲ್ಲಿ ಮಹಿಳಾ ದಿನಾಚರಣೆ

**ಇಂದು ಚರ್ಮ ರೋಗ ತಪಾಸಣೆ, ನಾಳೆ ದಂತ ತಪಾಸಣೆ**

ದಾವಣಗೆರೆ, ಮಾ. 9- ತಾಲ್ಲೂಕಿನ ಅರಸಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ ಬರುವ ಚಿಕ್ಕ ಓಬಜ್ಜಿಹಳ್ಳಿಯ ಸೇವಾಲಾಲ್ ಸಮುದಾಯ ಭವನದಲ್ಲಿ ಎಸ್.ಎಸ್. ಕೇರ್ ಟ್ರಸ್ಟ್ ವತಿಯಿಂದ ವಿಶ್ವ ಮಹಿಳಾ ದಿನವನ್ನು ಆಚರಿಸಲಾಯಿತು.

ವಿಶ್ವ ಮಹಿಳಾ ದಿನಾಚರಣೆ ಪ್ರಯುಕ್ತ ಸ್ತ್ರೀ ರೋಗ ಮತ್ತು ಪ್ರಸೂತಿ ಆರೈಕೆ ಕಾರ್ಯಕ್ರಮವನ್ನು ಟ್ರಸ್ಟ್ ರೂವಾರಿ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್ ನೇತೃತ್ವದಲ್ಲಿ ನಡೆಸಲಾಯಿತು.

44 ಗರ್ಭಿಣಿಯರಿಗೆ ಮತ್ತು ಸ್ತ್ರೀ ರೋಗದ ಫಲಾನುಭವಿಗಳಿಗೆ ಸ್ತ್ರೀ ರೋಗ ತಜ್ಞೆ ಡಾ. ಪ್ರೇಮ ಪ್ರಭುದೇವ್ ಮತ್ತು ತಂಡದವರು ಚಿಕಿತ್ಸೆ ನೀಡಿದರು.

ಸಮುದಾಯ ಆರೋಗ್ಯ ವಿಭಾಗದ ಮುಖ್ಯಸ್ಥ ಡಾ. ಅಶ್ವಿನ್ ಕುಮಾರ್ ಮತ್ತು ತಂಡದವರು ಕಾರ್ಯಕ್ರಮ ಆಯೋಜಿಸಿದ್ದರು. ಡಾ. ಶೀಲಾ ಪಿ. ಹಾವೇರಿ, ಡಾ. ಶಾಂತಲಾ ಅರುಣ್ ಕುಮಾರ್, ಡಾ. ರಂಗನಾಥ್ ಮತ್ತು ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ನಾಳೆ ದಿನಾಂಕ 10 ರ ಗುರುವಾರ ಚರ್ಮ ರೋಗ ತಪಾಸಣೆ, ದಿನಾಂಕ 11 ರ ಶುಕ್ರವಾರ ದಂತ ತಪಾಸಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

# ಮಹಿಳೆಯರಿಗೆ ಬೇಕು ಶೇ.40 ಮೀಸಲಾತಿ

**(1ನೇ ಪುಟದಿಂದ)** ಕುಳಿತುಕೊಳ್ಳಲು ಕುರ್ಚಿ, ಜಮಖಾನ ಸೇರಿದಂತೆ ಸಭೆಗೆ ಸಿದ್ಧತೆಗಳನ್ನು ಮಹಿಳೆಯರೇ ಮಾಡುತ್ತಿದ್ದರು. ಆದರೆ ಸಭೆಯ ಮಾತುಗಳನ್ನು ಮಾತ್ರ ಕಿಟಕಿ ಅಥವಾ ಬಾಗಿಲುಗಳ ಹಿಂದೆ ನಿಂತು ಕೇಳಿಸಿಕೊಳ್ಳುತ್ತಿದ್ದರು. ಇದನ್ನು ಗಮನಿಸಿದ ನಾನು ಮುಂದಿನ ದಿನಗಳಲ್ಲಿ ಮಹಿಳೆಯರಿಗೂ ಸಭೆಯಲ್ಲಿ ಪ್ರಾತಿನಿಧ್ಯ ಕೊಡಬೇಕೆಂದು ಹೇಳಿದಾಗ, ಪರಿಸ್ಥಿತಿ ಬದಲಾಗತೊಡಗಿತು ಎಂದು ಹೇಳಿದರು.

ಶ್ರೀಮತಿ ಸುನಿತಾ ವೀರನಾರಾಯಣ ಅವರಿಗೆ 'ವನಿತಾ ಸೇವಾ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಕೆನರಾ ಬ್ಯಾಂಕ್ ರೀಜನಲ್ ಆಫೀಸ್‌ನ ವಿಭಾಗೀಯ ಮುಖ್ಯಸ್ಥರಾದ ನಾಗರತ್ನ ಜಿ.ಆರ್., ಜಿಲ್ಲಾ ಸಂತಾನೋತ್ಪತ್ತಿ ಮತ್ತು ಮಕ್ಕಳ ಕಾರ್ಯಕ್ರಮದ ಅನುಷ್ಠಾನ ಅಧಿಕಾರಿ ಡಾ. ಮೀನಾಕ್ಷಿ ಕೆ.ಎಸ್. ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ನೇತಾರ್ ಎಸ್.ವರ್ಣೇಕರ್ ಪ್ರಾರ್ಥಿಸಿದರು. ಪದ್ಮಾ ಪ್ರಕಾಶ್ ಸ್ವಾಗತಿಸಿದರು. ನಳಿನಿ ಅಚ್ಯುತ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಹೇಮಾ ಶ್ರೀನಿವಾಸ್ ವರದಿ ವಾಚಿಸಿದರು. ಪ್ರಭಾ ರವೀಂದ್ರ ನಿರೂಪಿಸಿದರು. ಗೀತಾ ಬದರಿನಾಥ್ ವಂದಿಸಿದರು. ನಾಗತ್ನ ಜಗದೀಶ್ ಸ್ಪರ್ಧೆಗಳ ಬಗ್ಗೆ ವಿವರಿಸಿದರು.

# ಮಹಿಳೆಯರ ಸಹಭಾಗಿತ್ವದಿಂದ ಸಶಕ್ತ ರಾಷ್ಟ್ರ ನಿರ್ಮಾಣ ಸಾಧ್ಯ



ರಾ.ಲ. ಕಾಯ್ದೆ ಕಾಲೇಜಿನಲ್ಲಿನ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ದಾವಣಗೆರೆ ವಿವಿ ಸಿಂಡಿಕೇಟ್ ಸದಸ್ಯರಾದ ವಿಜಯಲಕ್ಷ್ಮಿ ಹಿರೇಮಠ

ದಾವಣಗೆರೆ, ಮಾ. 9- ಮಹಿಳೆಯರ ಸಹಭಾಗಿತ್ವದಿಂದ ಸಶಕ್ತ ರಾಷ್ಟ್ರ ನಿರ್ಮಾಣ ಸಾಧ್ಯ ಎಂದು ದಾವಣಗೆರೆ ವಿವಿ ಸಿಂಡಿಕೇಟ್ ಸದಸ್ಯರಾದ ವಿಜಯಲಕ್ಷ್ಮಿ ಹಿರೇಮಠ ಅಭಿಪ್ರಾಯಪಟ್ಟರು.

ನಗರದ ರಾ.ಲ. ಕಾಯ್ದೆ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಹಿಳೆಯರಿಗೆ ಪ್ರೊತ್ಸಾಹ ನೀಡುವ ಜೊತೆಗೆ ಅವರ ಸಾಧನೆಗಳಿಗೆ ಸಾಥ್ ನೀಡುವ ಪುರುಷರ ಮನೋಭಾವ ಕೂಡ ಮುಖ್ಯವಾಗಿರುತ್ತದೆ. ಸಮಾಜದಲ್ಲಿ ನಿರುದ್ಯೋಗಿ ಪುರುಷರನ್ನು ಕಾಣಬಹುದು. ಆದರೆ ನಿರುದ್ಯೋಗಿ ಮಹಿಳೆಯನ್ನು ಕಾಣಲು ಅಸಾಧ್ಯ ಎಂದರು.

ಮಹಿಳೆಯರು ಮನೆಯಲ್ಲಿಯೇ ಕಸೂತಿ, ಟೈಲರಿಂಗ್, ಆಹಾರ ಪದಾರ್ಥಗಳ ತಯಾರಿಕೆ ಮುಂತಾದ ಸ್ವಯಂ ಉದ್ಯೋಗವನ್ನು ಮಾಡುತ್ತಾರೆ. ಜೊತೆಗೆ ಕುಟುಂಬದ ಇತರೆ ಸದಸ್ಯರ ಆರೋಗ್ಯ ಸೇರಿ ಇತರೆ ಕಾಳಜಿಯನ್ನು ಸಹ ಹೊಂದಿರುತ್ತಾರೆ ಎಂದು ಹೇಳಿದರು. ಮಹಿಳೆಯಲ್ಲಿ ವಿಶೇಷವಾದ ಸೇವಾ ಗುಣಗಳಿದ್ದು, ತಾಯಿಯಾಗಿ, ಹೆಂಡತಿಯಾಗಿ, ಶುಶ್ರೂಷಕಿಯಾಗಿ, ಶಿಕ್ಷಕಿಯಾಗಿ, ಮಕ್ಕಳ ಲಾಲನೆ, ಪೋಷಣೆಯ ಜವಾಬ್ದಾರಿಯನ್ನು ಸಹ ನಿಭಾಯಿಸುತ್ತಾಳೆ ಎಂದರು.

ಪ್ರತಿಯೊಬ್ಬ ಮಹಿಳೆ ಕೂಡ ಅಸಾಮಾನ್ಯ, ಅಸಾಧಾರಣ ಪ್ರತಿಭೆಯನ್ನು ಹೊಂದಿದ್ದು, ಮಹಿಳೆ ಅಬಲೆಯೂ ಅಲ್ಲ, ಸಬಲೆಯೂ ಅಲ್ಲ, ಪ್ರಭಲೆ ಎಂದು ಪ್ರತಿಪಾದಿಸಿದರು.


ಮಹಿಳೆ ಅಹಂಕಾರ, ದಾಷ್ಟ್ಯಕ್ಕೆ ಒಳಗಾಗದೇ ಸಹಭಾಗಿತ್ವ ಮನೋಭಾವನೆ ಬೆಳೆಸಿಕೊಳ್ಳುವಂತೆ ಸಲಹೆ ನೀಡಿದರು.

ಇದೇ ವೇಳೆ ಮಹಿಳಾ ಅಂಚೆ ಪೇದೆ ಭಾಗ್ಯಶ್ರೀ, ಆರೋಗ್ಯ ಸಹಾಯಕಿಯರಾದ ಸುಮಿತ್ರ ಹೆಗಡೆ, ನೇತ್ರಾವತಿ, ಹೆಚ್.ಜಿ. ವಾಸಂತಿ, ಬಿ. ಕವಿತಾ, ಸಾವಯವ ಕೃಷಿ ಸಾಧಕಿ ಕೆ.ಜಿ. ವಸಂತಮ್ಮ ಅವರನ್ನು ಗೌರವಿಸಲಾಯಿತು.

ಸಖಿ ಒನ್ ಸ್ಟಾಪ್ ಸೆಂಟರ್ ಪ್ಯಾರಾ ಲೀಗಲ್ ಅಡ್ವೋಕೇಟ್ ಎಂ.ಎನ್. ಮಧುರಾ ಮಾತನಾಡಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ. ಎಂ. ಸೋಮಶೇಖರಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಹರಿಹರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಶ್ವೇತಾ ಈಶ್ವರ್, ಸಖಿ ಒನ್ ಸ್ಟಾಪ್ ಸೆಂಟರ್‌ನ ಆಪ್ತ ಸಮಾಲೋಚಕಿ ಅಂಬಿಕಾ, ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ಟಿ.ಸಿ. ಪಂಕಜ, ಬಿ. ಅರ್ಚನಾ ಮತ್ತಿತರರಿದ್ದರು.

# ಶ್ಯಾಬನೂರಿನಲ್ಲಿ ಇಂದು ಕಂಕಣಧಾರಣೆ



**12 ರಂದು ತೇರು**

ದಾವಣಗೆರೆ - ಶ್ಯಾಬನೂರಿನ ಶ್ರೀ ಆಂಜನೇಯ ಸ್ವಾಮಿ ರಥೋತ್ಸವ ಇದೇ ದಿನಾಂಕ 12ರಂದು ಜರುಗಲಿದೆ. ಈ ಪ್ರಯುಕ್ತ ಇಂದು ಬೆಳಿಗ್ಗೆ ಶ್ರೀ ಸ್ವಾಮಿಗೆ ಅಭಿಷೇಕ, ಅಲಂಕಾರ ಪೂಜಾದಿಗಳು ಏರ್ಪಾಡಾಗಿವೆ. ಸಂಜೆ 6 ಗಂಟೆಗೆ ಶ್ರೀ ಸ್ವಾಮಿಯ ಕಂಕಣಧಾರಣೆ ನಡೆಯಲಿದೆ ಎಂದು ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಧರ್ಮದರ್ಶಿ ಕಮಿಟಿ ತಿಳಿಸಿದೆ.

ನಾಳೆ ಶುಕ್ರವಾರ ಬೆಳಿಗ್ಗೆ 6 ಗಂಟೆಯಿಂದ ಶ್ರೀ ಸ್ವಾಮಿಗೆ ಅಭಿಷೇಕ, ಅಲಂಕಾರ ಪೂಜಾದಿಗಳು, ಗಣ ಪತಿ ಪೂಜೆ, ವಿಗ್ರಾಹ, ನಾಂದಿ, ಸಂಕಲ್ಪ, ಕಲಶಸ್ಥಾಪನೆ, ನವಗ್ರಹ, ಅಂಶುರಾರ್ಪಣೆ, ಪ್ರಧಾನ ದೇವತಾ ಸ್ಥಾಪನೆ, ಮೃತ್ಯುಂಜಯ ಜಪಾದಿಗಳು ಜರುಗಲಿವೆ.

ದಿನಾಂಕ 12ರ ಶನಿವಾರ ಬೆಳಗಿನಜಾವ 4 ಗಂಟೆಗೆ ಶ್ರೀ ಆಂಜನೇಯ ಸ್ವಾಮಿಗೆ ಮತ್ತು ಶ್ರೀ ರಾಮ ದೇವರುಗಳ ಪೂಜಾದಿಗಳು, ಅಭಿಷೇಕ, ಅಲಂಕಾರ ಪೂಜಾ ಅವಾಹಿತ ದೇವತೆಗಳ ಪೂಜಾ ಜಪಾದಿಗಳು, ಶ್ಯಾನುಭೋಗರ, ಕನ್ವೀನರ್, ಗೌಡ್ರು, ಪಟೇಲರು, ಥೇರ್ಮನ್ನರು ಹಾಗೂ ಗ್ರಾಮಸ್ಥರಿಂದ ಗಣಪತಿ, ನವಗ್ರಹ ಪೂಜೆ ನಡೆಯಲಿದೆ. ಬೆಳಿಗ್ಗೆ 8 ಗಂಟೆಗೆ ರಥದ ಕಳಸ ಸ್ಥಾಪನೆ, ಹೋಮ, ಹವನ, ಬಲಿ ಪೂರ್ಣಾಹುತಿ ನಂತರ ರಾತ್ರಿ 8 ಗಂಟೆಗೆ ನಾಗನೂರು ಗ್ರಾಮದಿಂದ ಸ್ವಾಮಿಗಳ ಆಗಮನ, ನಂತರ ಗ್ರಾಮ ಪ್ರದಕ್ಷಿಣೆ, ನಂತರ ರಥ ಪೂಜೆ, ಮಂಗಳಾಷ್ಟಕ ನಂತರ ರಾತ್ರಿ 12 ಗಂಟೆಗೆ ಅಮೃತ ಶುಭ ಯೋಗದ ಘಳಿಗೆಯಲ್ಲಿ ರಥೋತ್ಸವ ಜರುಗಲಿದೆ.

ದಿನಾಂಕ 13ರ ಭಾನುವಾರ ಬೆಳಿಗ್ಗೆ 6 ಗಂಟೆಗೆ ಶ್ರೀ ಸ್ವಾಮಿಗೆ ಅಭಿಷೇಕ, ಅಲಂಕಾರ, ಪೂಜಾ, ಅವಾಹಿತ ದೇವತೆಗಳ ಪೂಜೆ ಹಾಗೂ ನಿತ್ಯ ಸೇವಾದಿಗಳು ನಂತರ ಮಧ್ಯಾಹ್ನ 2 ಗಂಟೆಗೆ ಬೆಲ್ಲದ ಬಂಡಿ ಉತ್ಸವ ಮತ್ತು ಶ್ಯಾಬನೂರು ಸ್ವಾಮಿ, ನಾಗನೂರು ಸ್ವಾಮಿ ಶಿರಮಗೊಂಡನಹಳ್ಳಿ ಮತ್ತು ನಿಟುವಳ್ಳಿ ಗ್ರಾಮಗಳಿಗೆ ಸಂಚಾರ ಏರ್ಪಾಡಾಗಿದೆ.

ದಿನಾಂಕ 14ರ ಸೋಮವಾರ ಸಂಚಾರ ಮುಗಿಸಿಕೊಂಡು ಆಗಮಿಸುವ ದೇವರುಗಳನ್ನು ಬರ ಮಾಡಿಕೊಂಡು, ಶ್ಯಾಬನೂರು, ನಾಗನೂರು, ಶಿರಮಗೊಂಡನಹಳ್ಳಿ ಮತ್ತು ನಿಟುವಳ್ಳಿ ಗ್ರಾಮಸ್ಥರಿಂದ ಅಭಿಷೇಕ, ಅಲಂಕಾರ, ನಾಂದಿ, ಕಂಕಣ ವಿಸರ್ಜನೆ, ಧ್ವಜ ವಿಸರ್ಜನೆ ಹಾಗೂ ಓಕುಳಿ ಕಾರ್ಯಕ್ರಮ ಹಾಗೂ ಅನ್ನ ಸಂತರ್ಪಣೆ ನಡೆಯಲಿದೆ.

ಸೋಮವಾರ ರಾತ್ರಿ 9.30ಕ್ಕೆ ಶ್ರೀ ಮಾರುತಿ ನಾಟ್ಯ ಕಲಾ ಸಂಘದಿಂದ ಬಸವೇಶ್ವರ ರಂಗ ಮಂದಿರದಲ್ಲಿ 'ಕಲಿಯುಗದಲ್ಲಿ ಘರ್ಜಿಸಿದ ಕರ್ಣಾರ್ಜುನ' ನಾಟಕ ಪ್ರದರ್ಶನಗೊಳ್ಳಲಿದೆ.

# ನಗರದಲ್ಲಿ ನಾಳೆ ಉದ್ಯೋಗ ಮೇಳ

ದಾವಣಗೆರೆ, ಮಾ.9- ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಿಂದ ಮಾದರಿ ವೃತ್ತಿ ಕೇಂದ್ರದ ಯೋಜನೆ ಅಡಿಯಲ್ಲಿ 'ಆಜಾದಿ ಕಾ ಅಮೃತ ಮಹೋತ್ಸವ'ದ ಪ್ರಯುಕ್ತ ನಾಡಿದ್ದು ದಿನಾಂಕ 11 ರಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಉದ್ಯೋಗ ಮೇಳ ನಡೆಯಲಿದೆ.

ಉದ್ಯೋಗ ಮೇಳದಲ್ಲಿ ಖಾಸಗಿ ಕಂಪನಿಗಳು ಭಾಗವಹಿಸುತ್ತಿದ್ದು, ಎಸ್.ಎಸ್.ಎಲ್.ಸಿ, ಪಿಯುಸಿ, ಐ.ಟಿ.ಐ, ಡಿಪ್ಲೋಮಾ, ಬಿ.ಎ, ಬಿ.ಕಾಂ, ಬಿ.ಎಸ್ಸಿ, ಬಿ.ಬಿ.ಎ/ಬಿ.ಬಿ.ಎಂ, ಬಿ.ಸಿ.ಎ ಹಾಗೂ ಸ್ನಾತಕೋತ್ತರ ಪದವಿ ಹೊಂದಿದ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲಿದ್ದಾರೆ.

ಆಸಕ್ತ ಅಭ್ಯರ್ಥಿಗಳು ಇದೇ ದಿನಾಂಕ 11 ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಅಗತ್ಯ ದಾಖಲೆಗಳೊಂದಿಗೆ ಉದ್ಯೋಗ ಮೇಳದಲ್ಲಿ ಭಾಗವಹಿಸ ಬಹುದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿ ಕೆ.ಎನ್. ಗಿರೀಶ್ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192 259446, 9916661900, 7406323294.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಸ್.ಎಸ್. ಲೇಔಟ್ ಎ ಬ್ಲಾಕ್ ಮತ್ತು ಬಿ ಬ್ಲಾಕ್ ಬಸವೇಶ್ವರ ಬಡಾವಣೆ, ಶಾಂತಿನಗರ, ಮಹಾಲಕ್ಷ್ಮೀ ಲೇಔಟ್, ಬಾಲಾಜಿ ನಗರ, ನಿಜಲಿಂಗಪ್ಪ ಲೇಔಟ್, ನೌಕರರ ಸಮುದಾಯ ಭವನ, ಅಥಣಿ ಕಾಲೇಜ್, ಎಮ್‌ಬಿಎ ಕಾಲೇಜ್, ಆಫೀಸರ್ ಕ್ಲಬ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 4ರವರೆಗೆ ವಿದ್ಯುತ್ ಸರಬರಾಜುವಿನಲ್ಲಿ ವ್ಯತ್ಯಯವುಂಟಾಗಲಿದೆ ಹಾಗೂ ಶಿವಕುಮಾರಸ್ವಾಮಿ ಬಡಾವಣೆ, 1 ಮತ್ತು 2ನೇ ಹಂತ, ಹದಡಿ ರಸ್ತೆ, , ಸೆಂಟ್‌ಜಾನ್ಸ್ ಸ್ಕೂಲ್ 60 ಫೀಟ್‌ರೊಡ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಸಬ್ಸಿಡಿ ಹೆಚ್ಚಳದ ಪರಿಶೀಲನೆ

**(1ನೇ ಪುಟದಿಂದ)** ಆನಂದ್ ಸಿದ್ದನ್ಯಾಮೇಗೌಡ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಸಾಮಾನ್ಯವರ್ಗದ ಜನರು ಕೃಷಿ ಯಂತ್ರೋಪಕರಣಗಳನ್ನು ಖರೀದಿಸಲು ಈವರೆಗೂ ಶೇ. 40ರಷ್ಟು ಸಬ್ಸಿಡಿ ನೀಡಲಾಗುತ್ತಿತ್ತು, ಇದನ್ನು ಶೇ.75ಕ್ಕೆ ಏರಿಸುವ ಬಗ್ಗೆ ಚರ್ಚಿಸಲಾಗಿದೆ, ಅಂತಿಮವಾಗಿ ಮತ್ತೊಂದು ಬಾರಿ ಅಧಿಕಾರಿಗಳ ಜೊತೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಈ ಬಾರಿ ಹೆಚ್ಚಿನ ಅನುದಾನ ಸಿಕ್ಕಿಲ್ಲ, ರಾಜ್ಯ ಸರ್ಕಾರದ ಅನುದಾನದಲ್ಲೇ ನಾವು ಸಬ್ಸಿಡಿ ಕೊಡುತ್ತಿದ್ದೇವೆ. ಹಣ ಕಾಸಿನ ಲಭ್ಯತೆ ಮೇಲೆ ನಾವು ಹಂತ ಹಂತವಾಗಿ ಯಂತ್ರೋಪಕರಣಗಳ ಖರೀದಿಗೆ ಹಣ ಮಂಜೂರು ಮಾಡುವುದಾಗಿ ಹೇಳಿದರು.

# ಹೆಚ್ಚುವರಿ ಟ್ರಾನ್ಸ್‌ಫಾರ್ಮರ್ ಅಳವಡಿಕೆಗೆ ರೈತರ ಒತ್ತಾಯ

ದಾವಣಗೆರೆ, ಮಾ. 9- ತಾಲ್ಲೂಕಿನ ತೋಳಹುಣಸೆ ಮತ್ತು ಹೆಚ್. ಕಲಪನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ತುಂಬಾ ಸಮಸ್ಯೆ ಉಂಟಾಗಿದ್ದು, ಇದನ್ನು ನೀಗಿಸಲು ಕೂಡಲೇ ಹೆಚ್ಚುವರಿ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸುವಂತೆ ಈ ಭಾಗದ ರೈತರು ಒತ್ತಾಯಿಸಿದ್ದಾರೆ.

ಈ ಪ್ರದೇಶಗಳಲ್ಲಿ ಮರಗಳು ಹೆಚ್ಚಾಗಿರುವುದರಿಂದ ವಿದ್ಯುತ್ ಕಂಬಗಳಿಗೆ ಮರದ ರೆಂಬೆಗಳು ಬಡಿದು ವಿದ್ಯುತ್ ಪ್ರವಾಹದಲ್ಲಿ ಏರುಪೇರಾಗಿ ಕರೆಂಟ್ ಬಾಕ್ಸ್‌ಗಳು, ಪಂಪ್‌ಸೆಟ್‌ಗಳು ಸುಟ್ಟು ಹೋಗುತ್ತಿವೆ. ಆದ್ದರಿಂದ ಈ ಭಾಗಕ್ಕೆ ಸಂಬಂಧಿಸಿದ ಬೆಸ್ಕಾಂ ಇಲಾಖೆಯವರು ತಮ್ಮ ಸಿಬ್ಬಂದಿ ಜೊತೆ ಬಂದು ಪರಿಶೀಲಿಸಿ, ಸಮಸ್ಯೆ ಬಗೆಹರಿಸುವಂತೆ ಮನವಿ ಮಾಡಿದ್ದಾರೆ.

ನಿತ್ಯ ಬೆಳಿಗ್ಗೆ 5 ರಿಂದ ಮಧ್ಯಾಹ್ನ 12 ಹಾಗೂ ಮಧ್ಯಾಹ್ನ 12 ರಿಂದ ಸಂಜೆ 6 ರವರೆಗೂ ಎರಡು ಭಾಗ ಮಾಡಿ ವಿದ್ಯುತ್ ಪೂರೈಸಿದರೆ ರೈತರ ಬೆಳೆಯು ಸಹ ಉಳಿಯುತ್ತದೆ. ಹಗಲು ವಿದ್ಯುತ್ ಕೊಟ್ಟರೆ ಆಟೋ ಸ್ಟಾರ್ಟರ್ ಕೆಲಸ ಮಾಡದಿದ್ದರೂ ರೈತರು ಅದನ್ನು ದುರಸ್ತಿ ಮಾಡಿ ಸ್ಟಾರ್ಟ್ ಮಾಡಿಕೊಳ್ಳಲು ಅನುಕೂಲವಾಗುತ್ತದೆ ಎಂದು ಹೇಳಿದ್ದಾರೆ.

# ಮಲಬಾರ್‌ನಲ್ಲಿ ಮಹಿಳಾ ದಿನಾಚಾರಣೆ




ದಾವಣಗೆರೆ, ಮಾ.9- ಮಲಬಾರ್ ಗೋಲ್ಡ್ ಮತ್ತು ಡೈಮೆಂಡ್ಸ್ ವತಿಯಿಂದ ಮಹಿಳಾ ದಿನ ಆಚರಿಸಲಾಯಿತು. ಮಲಬಾರ್ ಗೋಲ್ಡ್ ಮತ್ತು ಡೈಮೆಂಡ್ಸ್ ಮುಖ್ಯಸ್ಥ ಬೇಸಿಲ್ ರಾಜನ್ ಸರ್ಫರಾಜ್ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಕುಡಿಯುವ ನೀರಿನ ವಿಚಾರವಾಗಿ ಕಾಲೇಜು ವಿದ್ಯಾರ್ಥಿಗಳ ಹೊಡೆದಾಟ

ದಾವಣಗೆರೆ, ಮಾ.9- ಕುಡಿಯುವ ನೀರಿನ ವಿಚಾರದಲ್ಲಿ ಕಾಲೇಜಿನ ಎರಡು ಗುಂಪುಗಳ ನಡುವೆ ಹೊಡೆದಾಟ ನಡೆದ ಘಟನೆ ವರದಿಯಾಗಿದೆ.

ಎಂಸಿಸಿ ಬಿ ಬ್ಲಾಕ್‌ನಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಕುಡಿಯುವ ನೀರಿನ ವಿಚಾರಕ್ಕಾಗಿ ಗಲಾಟೆ ಮಾಡಿಕೊಂಡಿದ್ದು ಕೈ-ಕೈ ಮಿಲಾಯಿಸುವ ಹಂತಕ್ಕೆ ತಲುಪಿ, ನಂತರ ಕಾಲೇಜಿನ ಹೊರಗಡೆಯೂ ಗಲಾಟೆ ಮಾಡಿಕೊಂಡಿದ್ದಾರೆ.

ಈ ಮಧ್ಯೆ ಗಲಾಟೆಯಲ್ಲಿ ನಿರತ ಯುವಕನ ಪರವಾಗಿ ಹೊರಗಿನಿಂದ ಬಂದ ಪುಂಡರ ತಂಡವೊಂದು ಒಬ್ಬ ವಿದ್ಯಾರ್ಥಿಗೆ ಹಿಗ್ಗಾಮುಗ್ಗಾ ಥಳಿಸಿ, ಹಿಡಿದು ಎಳೆದಾಡುವ, ಮುಷ್ಟಿ ಕಟ್ಟಿಕೊಂಡು ವಿದ್ಯಾರ್ಥಿಗಳಿಗೆ ಗುದ್ದುವ ದೃಶ್ಯಗಳು ಮೊಬೈಲ್‌ನಲ್ಲಿ ಸೆರೆಯಾಗಿವೆ.

ವಿಷಯ ತಿಳಿಯುದ್ದಂತೆ ಸ್ಥಳಕ್ಕೆ ಧಾವಿಸಿದ ಪೊಲೀಸರು ಕೆಲವರನ್ನು ವಶಕ್ಕೆ ಪಡೆದು, ಠಾಣೆಗೆ ಕರೆದೊಯ್ದಿದ್ದಾರೆ. ಪೊಲೀಸರನ್ನು ಕಾಣುತ್ತಿದ್ದಂತೆಯೇ ಪುಂಡರ ಗುಂಪಿನ ಕೆಲವರು ಅಲ್ಲಿಂದ ಕಾಲ್ಕಿತ್ತಿದ್ದಾರೆ. ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ರೋಟರಿಯಿಂದ ಕೋವಿಶೀಲ್ಡ್ ಲಸಿಕೆ



ದಾವಣಗೆರೆ, ಮಾ. 9- ರೋಟರಿ ಸಂಸ್ಥೆ ವಿದ್ಯಾನಗರ ಇಲ್ಲಿ ಕೋವಿಶೀಲ್ಡ್ ಮತ್ತು ಬೂಸ್ಟರ್ ಲಸಿಕೆ ಹಾಕಿಸಲಾಯಿತು.

# ನಂದಿಹಳ್ಳಿಯಲ್ಲಿ ಇಂದಿನಿಂದ ಬಸವೇಶ್ವರ ಜಾತ್ರೆ

ರಾಣೇಬೆನ್ನೂರು ತಾಲ್ಲೂಕಿನ ನಂದಿಹಳ್ಳಿ ಬಸವೇಶ್ವರ ದೇವರ ಜಾತ್ರೆ ಹಾಗೂ ರಥೋತ್ಸವ ಕಾರ್ಯಕ್ರಮಗಳು ಇಂದಿನಿಂದ ಇದೇ ದಿನಾಂಕ 15 ರವರೆಗೆ ನಡೆಯಲಿವೆ.

ಇಂದು ಕಂಕಣ ಧಾರಣೆ, ನಾಳೆ ಕಳಸ ಪೂಜೆ, 12 ರಂದು ಬೆಳಿಗ್ಗೆ 7 ಗಂಟೆಗೆ ಕುಂಭಾಭಿಷೇಕ, 13 ರಂದು ಸಣ್ಣ ತೇರು, 14 ರಂದು ಬೆಳಿಗ್ಗೆ 7 ಗಂಟೆಗೆ ದೊಡ್ಡ ತೇರು, ಗುಗ್ಗಳ, ಜವಳ ಕಾರ್ಯ, ದೀಡು ನಮಸ್ಕಾರ, ಎಡೆ ಕೊಡುವುದು, ಬೆಲ್ಲದ ಬಂಡಿ, ಎತ್ತಿನ ಮೆರವಣಿಗೆ ನಡೆಯಲಿದೆ. 15 ರಂದು ಮುಂಜಾನೆ 11 ಕ್ಕೆ ಓಕುಳಿ, ಬೆಲ್ಲದ ಬಂಡಿ, ಎತ್ತಿನ ಮೆರವಣಿಗೆ ನಡೆಯಲಿದೆ.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಮ್.ಬಿ ಕೇರಿ, ಹೊಂಡದ ಸರ್ಕಲ್ ಸುತ್ತಮುತ್ತ, ಕಾಯಿಪೇಟೆ, ಜಾಲಿನಗರ, ಟೀಚರ್ ಕಾಲೋನಿ, ಶಿವಾಜಿ ನಗರ, ಶಿವಾಜಿ ಸರ್ಕಲ್, ಚಲುವಾದಿ ಕೇರಿ, ಇಡಬ್ಲ್ಯೂಎಸ್ ಕಾಲೋನಿ, ಹಳೇಪೇಟೆ, ಬಾರ್‌ಲೈನ್ ರಸ್ತೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ರಾಗಿ ಖರೀದಿ : ಕೇಂದ್ರಕ್ಕೆ ಪತ್ರ

**(1ನೇ ಪುಟದಿಂದ)** ಹೆಚ್ಚಿನ ಪ್ರಮಾಣದ ರಾಗಿ ಖರೀದಿ ಮಾಡಬೇಕಾಗಿದೆ ಎಂದು ಹೇಳಿದರು. ಇದಕ್ಕೂ ಮುನ್ನ ಮಾತನಾಡಿದ ಗೂಳಿಹಟ್ಟಿ ಶೇಖರ್, ನಿಗದಿತ ಅವಧಿಗಿಂತ ಮುಂಚೆಯೇ ರಾಗಿ ಖರೀದಿ ನಿಲ್ಲಿಸಲಾಗಿದೆ, ಸಣ್ಣ ಮತ್ತು ದೊಡ್ಡ ರೈತರು ಎಂದು ವಿಭಾಗಿಸಿದ್ದಾರೆ. ಇದು ಸರಿಯಲ್ಲ, ರಾಗಿ ಖರೀದಿ ಮಿತಿಯನ್ನು ತೆರವು ಮಾಡಬೇಕು. ಹೊಸದುರ್ಗದಲ್ಲಿ ರೈತರು ರಾಗಿ ಚೀಲ ಇಟ್ಟು ಪ್ರತಿಭಟನೆ ಮಾಡುತ್ತಿದ್ದಾರೆ ಎಂದಾಗ, ಹಲವು ಶಾಸಕರು ದನಿಗೂಡಿಸಿ, ರಾಗಿ ಖರೀದಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

# ಕಿತ್ತೂರು ರಾಣಿ ಚೆನ್ನಮ್ಮ ಪ್ರತಿಷ್ಠಾನಕ್ಕೆ ಪದಾಧಿಕಾರಿಗಳ ಆಯ್ಕೆ

ದಾವಣಗೆರೆ, ಮಾ.9- ಕಿತ್ತೂರು ರಾಣಿ ಚೆನ್ನಮ್ಮ ಪ್ರತಿಷ್ಠಾನಕ್ಕೆ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು. ಗೌರವ ಅಧ್ಯಕ್ಷರಾಗಿ ಎ.ಎಸ್. ಮೃತ್ಯುಂಜಯ, ಅಧ್ಯಕ್ಷರಾಗಿ ಶರಣಪ್ಪ ಕೆ., ಉಪಾಧ್ಯಕ್ಷರುಗಳಾಗಿ ಹೆಚ್. ಜಯಣ್ಣ, ಶಿವಮೂರ್ತಿಸ್ವಾಮಿ ವಿ., ಎಸ್.ಜಿ. ಸಂಗಪ್ಪ, ಸಂಚಾಲಕರಾಗಿ ಡಾ. ಬಿ.ವಿ. ಧನಂಜಯ ಮೂರ್ತಿ, ಗೌ. ಕಾರ್ಯದರ್ಶಿಯಾಗಿ ಡಾ. ಸುರೇಶ್ ಬಾಬು ಪಿ., ಪ್ರಧಾನ ಕಾರ್ಯದರ್ಶಿಯಾಗಿ ಕೆ.ಎಸ್. ಗಂಗಾಧರ, ಸಹಕಾರ್ಯದರ್ಶಿಯಾಗಿ ಕೆ. ಮಲ್ಲಿಕಾರ್ಜುನ ಕಟ್ಟಿಮನಿ, ಸಂಘಟನಾ ಕಾರ್ಯದರ್ಶಿಯಾಗಿ ಪಿ.ಎ. ನಾಗರಾಜ, ಖಜಾಂಚಿಯಾಗಿ ಕಾಯಿಪೇಟೆ ಹಾಲೇಶ್, ಸಲಹೆಗಾರರಾಗಿ ಕೆ.ಸಿ. ನಾಗರಾಜ್, ಎನ್.ಎಂ. ಆಂಜನೇಯ, ನಿರ್ದೇಶಕರುಗಳಾದ ಬಿ.ವಿ. ರಾಜಶೇಖರ್, ಬಿ.ಎಸ್. ಚನ್ನಬಸಪ್ಪ ಅವರುಗಳು ಆಯ್ಕೆಯಾಗಿದ್ದಾರೆ ಎಂದು ಡಾ. ಕೆ.ಎಸ್. ಗಂಗಾಧರ್ ತಿಳಿಸಿದ್ದಾರೆ.

# ಕೇದಾರ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಸನಾತನ ಧರ್ಮ ಜಾಗೃತಿ ಅಭಿಯಾನ

ಜಗಳೂರು, ಮಾ.9- ಕರ್ನಾಟಕ ರಾಜ್ಯದ ಹನ್ನೆರಡು ಜಿಲ್ಲೆಗಳ ವ್ಯಾಪ್ತಿಯಲ್ಲಿ ಶ್ರೀ ಹಿಮವತ್ಕೇದಾರ ಜಗದ್ಗುರುಗಳ ಸಾನ್ನಿಧ್ಯದಲ್ಲಿ ನಾಳೆ ದಿನಾಂಕ 10 ರ ಗುರುವಾರದಿಂದ ಇದೇ ದಿನಾಂಕ 25 ರವರೆಗೆ ಸನಾತನ ಧರ್ಮ ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ತಪೋಕ್ಷೇತ್ರ ಕಣ್ವಕುಪ್ಪೆ ಗವಿಮಠದ ಸ್ವಾಮೀಜಿ ತಿಳಿಸಿದ್ದಾರೆ.


**ನ್ಯೂ ಹೈಟೆಕ್ ವಯೋವೃದ್ಧರ ಆರೈಕೆ ಕೇಂದ್ರ (ರಿ)**

**ಸೇವೆಗಳು:**

* 24 ಗಂಟೆ ಕೇರ್ ಟೇಕಿಂಗ್
* ಸ್ಪೆಷಲ್ ರೂಮ್ಸ್ ವಿತ್ ಅಟ್ಯಾಚ್ ಬಾತ್ ರೂಂ
* ವೈದ್ಯಕೀಯ ಸೇವೆಗಳು
* ಶುಚಿ & ರುಚಿಯಾದ ಊಟ
* ಫಿಜಿಯೋಥೆರಪಿ
* ಆಯಿಲ್ ಮಸಾಜ್

ಇನ್ನೂ ಇತ್ಯಾದಿ ಸೇವೆಗಳನ್ನು ನೀಡಲಾಗವುದು.

ಮನೆಯಲ್ಲಿ ನೋಡಿಕೊಳ್ಳಲಾಗದ ಮತ್ತು ನಿವೃತ್ತಿ ಹೊಂದಿರುವ ವಯೋವೃದ್ಧರಿಗೆ ಮೇಲೆ ಸೂಚಿಸಿರುವ ಸೇವೆಗಳನ್ನು ನೀಡಿ, ಅವರಿಗೆ ಉತ್ತಮ ಆರೈಕೆ ಮಾಡಲಾಗವುದು.

ಸಂಪರ್ಕಿಸಿ

89711 92936, 76250 15036



**ಶ್ರೀ ಲಕ್ಷ್ಮೀ ವೆಂಕಟೇಶ್ವರಸ್ವಾಮಿ ಭೋವಿ ಎಜುಕೇಷನಲ್ ಅಸೋಸಿಯೇಟ್ಸ್ (ರಿ),ಗೊಲ್ಲರಹಳ್ಳಿ**

ಅಣಜಿ ಅಂಚೆ, ದಾವಣಗೆರೆ ತಾಲ್ಲೂಕು–577512

**ಬೇಕಾಗಿದ್ದಾರೆ**

ನಮ್ಮ ಸಂಸ್ಥೆಯ ಆಶ್ರಯದಲ್ಲಿ ದಾವಣಗೆರೆ ಜಗಳೂರು ತಾಲ್ಲೂಕು ಉಜ್ಜಪ್ಪವಡೆಯರಹಳ್ಳಿ ಗ್ರಾಮದಲ್ಲಿ ನಡೆಯುತ್ತಿರುವ ಶ್ರೀ ಲಕ್ಷ್ಮೀ ವೆಂಕಟೇಶ್ವರಸ್ವಾಮಿ ವಸತಿ ಪ್ರೌಢಶಾಲೆ, (ಅನುದಾನಿತ) ಯಲ್ಲಿ ಖಾಲಿ ಇರುವ ಸಹ ಶಿಕ್ಷಕರು (ಹಿಂದಿ) ಹುದ್ದೆಗೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರ ಆದೇಶ ಸಂಖ್ಯೆ:ಸಿ–8(4)ಖಾ.ಹು.ಭ/177/2019–20 ದಿನಾಂಕ: 12–12–2019 ಹಾಗೂ ಉಲ್ಲೇಖ ಸರ್ಕಾರದ ಪತ್ರ ಸಂಖ್ಯೆ:ಇಪಿ.398 ಎಸ್.ಇ.ಎಸ್.2021, ದಿನಾಂಕ: 21–01–2022 ರ ಅನ್ವಯ ಸರಕಾರ ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಿರುತ್ತಾರೆ.

| ಹುದ್ದೆ | ವಿದ್ಯಾರ್ಹತೆ | ಬಿಂದು | ಮೀಸಲಾತಿ |
|---|---|---|---|
| ಸಹ ಶಿಕ್ಷಕರು (ಹಿಂದಿ) | ಬಿ.ಎ.ಬಿ.ಇಡಿ (ಹಿಂದಿ ಐಚ್ಛಿಕ) | 05 | ಪ್ರವರ್ಗ–01 |

ಈ ಹುದ್ದೆಗೆ ಅರ್ಜಿಯನ್ನು ಸಲ್ಲಿಸುವ ಅಭ್ಯರ್ಥಿಗಳು ಅರ್ಜಿಯ ಒಂದು ಪ್ರತಿಯನ್ನು ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ದಾವಣಗೆರೆ ಜಿಲ್ಲೆ, ಇವರಿಗೆ ಹಾಗೂ ಅರ್ಜಿ ಇನ್ನೊಂದು ಪ್ರತಿಯನ್ನು ಕಾರ್ಯದರ್ಶಿಗಳು ಶ್ರೀ ಲಕ್ಷ್ಮೀ ವೆಂಕಟೇಶ್ವರಸ್ವಾಮಿ ಭೋವಿ ಎಜುಕೇಷನಲ್ ಅಸೋಸಿಯೇಟ್ಸ್ (ರಿ), ಗೊಲ್ಲರಹಳ್ಳಿ ಅಣಜಿ ಅಂಚೆ, ದಾವಣಗೆರೆ ತಾಲ್ಲೂಕು–577512 ಇವರಿಗೆ ತಮ್ಮ ವಿದ್ಯಾರ್ಹತೆಯ ಎಲ್ಲ ಮೂಲ ದಾಖಲೆಗಳ ದೃಢೀಕರಿಸಿದ ಝೆರಾಕ್ಸ್ ಪ್ರತಿಗಳೊಂದಿಗೆ ಹಾಗೂ ರೂ.500/– ಬ್ಯಾಂಕ್ ಡಿ.ಡಿ.ಯೊಂದಿಗೆ ರಜಿಸ್ಟರ್ ಅಂಚೆಯ ಮೂಲಕ ಈ ಪ್ರಕಟಣೆ ಪ್ರಕಟವಾದ ದಿನದಿಂದ 21 ದಿನಗಳೊಳಗೆ ಸಲ್ಲಿಸತಕ್ಕದ್ದು. ಸಂದರ್ಶನದ ದಿನಾಂಕವನ್ನು ಮುಂದೆ ತಿಳಿಸಯಲಾಗುವುದು.

ದಿನಾಂಕ: 10–03–2022 ಸಹಿ/– ಅಧ್ಯಕ್ಷರು ಸಹಿ/– ಕಾರ್ಯದರ್ಶಿ 9611481376



**ನವೋದಯ ಗ್ರಾಮ ವಿಕಾಸ ಚಾರಿಟೆಬಲ್ ಟ್ರಸ್ಟ್ (ರಿ)**

(ನಂ. MGC 4-0035-2004-05)

ಆಡಳಿತ ಕಛೇರಿ : ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಪ್ರಧಾನ ಕಚೇರಿ ಕಟ್ಟಡ, ಕೊಡಿಯಾಲ್ ಬೈಲ್, ಮಂಗಳೂರು - 575003

ಈ ಮೇಲ್ : ngvctmnr@gmail.com ವೆಬ್ ಸೈಟ್ : www.ngvct.org

ಫೋನ್ : 0824-2441689 / 4111689

**ಬೇಕಾಗಿದ್ದಾರೆ**

**ನವೋದಯ ಗ್ರಾಮ ವಿಕಾಸ ಚಾರಿಟೆಬಲ್ ಟ್ರಸ್ಟ್ (ರಿ) ಮಂಗಳೂರು** ಇವರಿಗೆ ದಾವಣಗೆರೆ ಜಿಲ್ಲೆಯ ವಿವಿಧ ತಾಲ್ಲೂಕಿನ ನವೋದಯ ಸ್ವ-ಸಹಾಯ ಗುಂಪು ಯೋಜನೆಗೆ **ತಾಲ್ಲೂಕು ಮೇಲ್ವಿಚಾರಕರು** ಮತ್ತು **ಪ್ರೇರಕರಾಗಿ** ಕೆಲಸ ನಿರ್ವಹಿಸಲು ಆಸಕ್ತಿ ಹೊಂದಿದ ಸೂಕ್ತ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

**ದಾವಣಗೆರೆ ಜಿಲ್ಲೆ : ತಾಲ್ಲೂಕು ಮೇಲ್ವಿಚಾರಕರು - 6** ಹಾಗೂ ದಾವಣಗೆರೆ ತಾಲ್ಲೂಕು, ಚನ್ನಗಿರಿ ತಾಲ್ಲೂಕು, ಹೊನ್ನಾಳಿ ತಾಲ್ಲೂಕು, ನ್ಯಾಮತಿ ತಾಲ್ಲೂಕು, ಹರಿಹರ ತಾಲ್ಲೂಕು, ಜಗಳೂರು ತಾಲ್ಲೂಕಿನ ವಿವಿಧ ಗ್ರಾಮ ವ್ಯಾಪ್ತಿಯ ಕೇಂದ್ರಕ್ಕೆ **ಪ್ರೇರಕರು.**

**ವಿದ್ಯಾರ್ಹತೆ:**

**ತಾಲ್ಲೂಕು ಮೇಲ್ವಿಚಾರಕರು :** ಕನಿಷ್ಠ ಪಿಯುಸಿ ಮೇಲ್ಪಟ್ಟ ವಿದ್ಯಾರ್ಹತೆ ಹೊಂದಿರಬೇಕು. ಸ್ವಸಹಾಯ ಗುಂಪು ಯೋಜನೆಯಲ್ಲಿ ಕನಿಷ್ಠ 1 ವರ್ಷ ಕೆಲಸ ನಿರ್ವಹಿಸಿ ಅನುಭವ ಹೊಂದಿರುವ ಅಭ್ಯರ್ಥಿಗಳಿಗೆ ಪ್ರಥಮ ಆದ್ಯತೆ ನೀಡಲಾಗುವುದು.

**ಪ್ರೇರಕರು:** ಕನಿಷ್ಠ ಎಸ್.ಎಸ್.ಎಲ್.ಸಿ. ಹಾಗೂ ಮೇಲ್ಪಟ್ಟ ವಿದ್ಯಾರ್ಹತೆ ಹೊಂದಿರುವ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

**ಈ ಕುರಿತು ದಿನಾಂಕ 21.03.2022ರೊಳಗೆ ಅಂಚೆ ಹಾಗೂ ಇ-ಮೇಲ್ ಮುಖಾಂತರ ಅರ್ಜಿ ಸಲ್ಲಿಸಬಹುದು.**

ವಿಳಾಸ : **ನವೋದಯ ಗ್ರಾಮ ವಿಕಾಸ ಚಾರಿಟೆಬಲ್ ಟ್ರಸ್ಟ್ (ರಿ)**

ದಿ ದಾವಣಗೆರೆ ಆಟೋಮೊಬೈಲ್ ಇಂಡಸ್ಟ್ರೀಯಲ್ ಕೋ-ಆಪ್ ಸೊಸೈಟಿ ಬಿಲ್ಡಿಂಗ್, ಪಿ.ಬಿ. ರಸ್ತೆ (ಪೂಜಾ ಹೋಟೆಲ್ ಎದುರು) ದಾವಣಗೆರೆ-577006



**ಬೇಕಾಗಿದ್ದಾರೆ**

Sales Executive - 2 (Male)

Service Front line Supervisor - 2 (Male)

Tele Caller - 2 (Girls)

Service Computer operator - 1

ಮೇಲ್ಕಾಣಿಸಿದ ಹುದ್ದೆಗಳಿಗೆ ಯಾವುದೇ ಪದವಿ ಹಾಗೂ ಕಂಪ್ಯೂಟರ್ ಅನುಭವವುಳ್ಳವರಿಗೆ ಆದ್ಯತೆ ನೀಡಲಾಗುವುದು. 30 ವರ್ಷ ವಯೋಮಿತಿಯಲ್ಲಿರಬೇಕು. ಆಸಕ್ತರು ಈ ಕೆಳಗಿನ ವಿಳಾಸಕ್ಕೆ ಅರ್ಜಿಯೊಂದಿಗೆ ಸಂಪರ್ಕಿಸಬಹುದು

Hero

**ಪ್ರಕಾಶಾ ಮೋಟಾರ್ಸ್**

ಅಂಬರ್‌ಕರ್ ಸಮೂಹ ಸಂಸ್ಥೆ

ನಂ. 1945/41 ಉಮಾಪತಿ ಆರ್ಕೇಡ್, ಹರಿಹರ ರಸ್ತೆ, ದಾವಣಗೆರೆ.

ಮೊ: 94498 65569



## ಬಲ್ಲೂರಿನಲ್ಲಿ ವಿಜೃಂಭಣೆಯ ರಥೋತ್ಸವ

ದಾವಣಗೆರೆ, ಮಾ. 9- ತಾಲ್ಲೂಕಿನ ಬಲ್ಲೂರು ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರ ದೇವರ ರಥೋತ್ಸವ ನಿನ್ನೆ ವಿಜೃಂಭಣೆಯಿಂದ ಜರುಗಿತು.

## ನೀಲಾನಹಳ್ಳಿ ಆಂಜನೇಯ ಕಾರಣಿಕ



ದಾವಣಗೆರೆ, ಮಾ.9- ತಾಲ್ಲೂಕಿನ ನೀಲಾನಹಳ್ಳಿಯಲ್ಲಿ ಶ್ರೀ ಆಂಜನೇಯ ಸ್ವಾಮಿ ಹಾಗೂ ದೊಡ್ಡಬಾತಿ ಗ್ರಾಮದ ಶ್ರೀ ಬೀರಲಿಂಗೇಶ್ವರ ಸ್ವಾಮಿಗಳ ಕಾರಣಿಕ ನಿನ್ನೆ ವಿಜೃಂಭಣೆಯಿಂದ ಜರುಗಿತು ಎಂದು ದೇವಸ್ಥಾನದ ಕನ್ವೀನರ್ ಎನ್.ಎಂ.ಆಂಜನೇಯ ಗುರೂಜಿ ತಿಳಿಸಿದ್ದಾರೆ.

**ಕಾರಣಿಕ :**

*'ರಾಮ ರಾಮ : ವರ್ಣನ ಆರ್ಭಟಕ್ಕೆ ಮುತ್ತಿನ ರಾಶಿಗೆ ಜಯ ಸಿಕ್ಕೀತು !*
*ನರ ಲೋಕದ ಜನ ಕೈ ಮುಗಿದಾರು !!*
*ದೊಡ್ಡವರ ಮನೆ ಮೇಲೆ ಕರಿ ಕಲ್ಲು ಬಿದ್ದೀತು !!! ಎಚ್ಚರ.'*

# ಕೇಂದ್ರದ ವೈಫಲ್ಯದಿಂದ ನವೀನ್ ಸಾವು

## ಸಿದ್ದರಾಮಯ್ಯ ಆರೋಪ, ನವೀನ್ ಪಾಲಕರಿಗೆ ಸಾಂತ್ವನ

ರಾಣೇಬೆನ್ನೂರು, ಮಾ. 9- ರಷ್ಯಾ ಉಕ್ರೇನ್ ಮೇಲೆ ದಾಳಿ ಮಾಡುತ್ತೆ, ಯುದ್ಧ ನಡೆಯುತ್ತದೆ ಎನ್ನುವ ಸುದ್ದಿ ಅನೇಕ ತಿಂಗಳುಗಳಿಂದ ಕೇಳಿ ಬರುತ್ತಿತ್ತು. ಆದರೂ ಸಹ ವಿದ್ಯಾರ್ಥಿಗಳು ಸೇರಿದಂತೆ ಉಕ್ರೇನ್ ನಲ್ಲಿದ್ದ ಭಾರತೀಯ ರನ್ನು ಕರೆಯಿ ಸಿಕೊಳ್ಳುವ ಬಗ್ಗೆ ಚಿಂತನೆ ಮಾಡಲಿಲ್ಲ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದರು.

ತಾಲ್ಲೂಕಿನ ಚಳಗೇರಿ ವೈದ್ಯಕೀಯ ವಿದ್ಯಾರ್ಥಿ ಪಾಲಕರಿಗೆ ಸಾಂತ್ವನ ಹೇಳಿ ನಗರದ ಕಾಂಗ್ರೆಸ್ ಕಛೇರಿಯಲ್ಲಿ ನಡೆದ ಸುದ್ದಿಗೋಷ್ಠಿ ಯಲ್ಲಿ ಅವರು ಮಾತನಾಡುತ್ತಿದ್ದರು.

ಬೇರೆ ರಾಷ್ಟ್ರದವರು ತಮ್ಮ ಪ್ರಜೆಗಳನ್ನು ಯುದ್ಧ ಪ್ರಾರಂಭವಾ ಗುವ ಮೊದಲೇ ಸುರಕ್ಷಿತವಾಗಿ ಉಕ್ರೇನ್‌ನಿಂದ ಕರೆಸಿಕೊಂಡರು. ಆದರೆ ಕಣ್ಣು ಕಾಣದ, ಕಿವಿ ಕೇಳದ, ದಪ್ಪ ಚರ್ಮದ ಮೋದಿ ಸರ್ಕಾರ ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೆ ತನ್ನ ವೈಫಲ್ಯ ಪ್ರದರ್ಶಿಸಿದ್ದು, ನವೀನ್ ಸಾವಿಗೆ ಕೇಂದ್ರ ಸರ್ಕಾರವೇ ಹೊಣೆ ಹೊರಬೇಕಾಗುತ್ತದೆ ಎಂದು ಸಿದ್ದರಾ ಮಯ್ಯ ತೀಕ್ಷ್ಣವಾಗಿ ಆರೋಪಿಸಿದರು.

ಶೇಖರಗೌಡ ಗ್ಯಾನಗೌಡರ ಮೊದಲ ಮಗ ಹರ್ಷ ವೈದ್ಯನಾಗಲು ಪ್ರಯತ್ನಿಸಿ ವಿಫಲವಾಗಿದ್ದರು. ಬಡತನ ದಲ್ಲಿಯೇ ಬೆಳೆದ ನವೀನ್ ವೈದ್ಯರಾಗಿ ಈ ಮಣ್ಣಿನಲ್ಲಿ ಬಡ ವರ ಸೇವೆ ಮಾಡುವ ಹಂಬಲವುಳ್ಳವರಾಗಿದ್ದರು. ಈಗಾ ಗಲೇ ನಾಲ್ಕು ವರ್ಷ ಪೂರೈಸಿದ್ದು, ಇನ್ನೊಂದು ವರ್ಷದಲ್ಲಿ ವೈದ್ಯರಾಗುತ್ತಿದ್ದರು.

ಆದರೆ, ಅದರಲ್ಲಿ ಯಶಸ್ಸು ಗಳಿಸದೆ ಸೆಲ್ ದಾಳಿಯಲ್ಲಿ ಎಲ್ಲರನ್ನೂ ಅಗಲಿದರು. ಇದು ಅತ್ಯಂತ ನೋವಿನ ಸಂಗತಿ ಎಂದು ಸಿದ್ದರಾಮಯ್ಯ ಸಂತಾಪ ವ್ಯಕ್ತಪಡಿಸಿದರು.

ಮಾಜಿ ಸ್ಪೀಕರ್ ಕೆ.ಬಿ. ಕೋಳಿವಾಡ, ಮಾಜಿ ಸಚಿವ ರಾದ ಜಯಮಾಲಾ, ರುದ್ರಪ್ಪ ಲಮಾಣಿ, ಬಸವರಾಜ ಶಿವಣ್ಣನವರ, ಮಾಜಿ ಶಾಸಕರಾದ ಬಿ. ಹೆಚ್. ಬನ್ನಿಕೋಡ, ಅಜ್ಜಂಪೀರ್ ಖಾದ್ರಿ, ಸೋಮಣ್ಣ ಬೇವಿನಮರದ, ಕಾಂಗ್ರೆಸ್ ಮುಖಂಡ ರಾದ ಪ್ರಕಾಶ ಕೋಳಿವಾಡ, ಬಸವನಗೌಡ ಮರದ, ಪ್ರಕಾಶ ಜೈನ್, ಮಂಜನಗೌಡ ಪಾಟೀಲ್, ಎಸ್.ಆರ್. ಪಾಟೀಲ್, ನಗರಸಭೆ ಸದಸ್ಯರು ಉಪಸ್ಥಿತರಿದ್ದರು.



### ನವೀನ್ ಓದು ನನ್ನೂರಲ್ಲಿ

"ನನ್ನ ವರುಣ ವಿಧಾನಸಭಾ ಕ್ಷೇತ್ರದ ನಂಜನಗೂಡಿನ ಕಾರ್ಖಾನೆಯಲ್ಲಿ ಶೇಖರಗೌಡ ಗ್ಯಾನಗೌಡ್ರು ಸೇವೆ ಸಲ್ಲಿಸುವಾಗ ನವೀನ್ ಅಲ್ಲಿಯೇ ವಿದ್ಯಾಭ್ಯಾಸ ಮಾಡಿದ್ದಾರೆ. ಅಲ್ಲಿಯೇ ಅವರು ಬಹಳಷ್ಟು ಕನಸು ಕಟ್ಟಿಕೊಂಡಿದ್ದರು ಎಂದು ಪಾಲಕರು ತಿಳಿಸಿದಾಗ ನನಗೆ ಬಹಳಷ್ಟು ನೋವಾಯಿತು ಎಂದು ಸಿದ್ದರಾಮಯ್ಯ ಹೇಳಿದರು.

### ಪ್ರಕಾಶ ಪತ್ರ

"ನನ್ನ ತಾಲ್ಲೂಕಿನವರಾದ ನವೀನ್ ಮೃತದೇಹ ಹಾಗೂ ಸುರಕ್ಷಿತವಾಗಿ ಐವರು ವಿದ್ಯಾರ್ಥಿಗಳನ್ನು ನಮ್ಮದೇ ಸ್ವಂತ ವಿಮಾನದಲ್ಲಿ ನಮ್ಮೂರಿಗೆ ಕರೆತರುತ್ತೇವೆ. ನಮಗೆ ಅನುಮತಿ ಕೊಡಿ ಎಂದು ಮಾಜಿ ಸ್ಪೀಕರ್ ಕೋಳಿವಾಡರ ಮಗ ಪ್ರಕಾಶ ಅವರು ದಿ. 1ರಂದು ಅಂದರೆ ನವೀನ್ ಮರಣ ಹೊಂದಿದ ದಿನದಂದೇ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದರು. ಆದರೆ ಕುರುಡು ಸರ್ಕಾರ ಇದುವರೆಗೂ ಯಾವ ಕ್ರಮ ಜರುಗಿಸಲಿಲ್ಲ ಎಂದು ಸಿದ್ದರಾಮಯ್ಯ ಹೇಳಿದರು.

## ಡಾ. ಹೆಚ್. ಗಿರಿಜಮ್ಮ ಸಾಹಿತ್ಯ ಪ್ರಶಸ್ತಿಗಾಗಿ ಕೃತಿಗಳ ಆಹ್ವಾನ



ಬೆಂಗಳೂರು, ಮಾ. 9- ಡಾ. ಹೆಚ್. ಗಿರಿಜಮ್ಮ ಸ್ನೇಹ ಬಳಗದಿಂದ ಕನ್ನಡದ ಪ್ರಸಿದ್ಧ ವೈದ್ಯರೂ, ಲೇಖಕರೂ ಆಗಿದ್ದ ಡಾ. ಹೆಚ್. ಗಿರಿಜಮ್ಮನವರ ಹೆಸರಿನಲ್ಲಿ ಈ ವರ್ಷದಿಂದ ಪ್ರಶಸ್ತಿ ಆರಂಭಿಸಲಾಗಿದೆ.

ಈ ಪ್ರಶಸ್ತಿಯು 25 ಸಾವಿರ ನಗದು ಹಾಗೂ ಸ್ಮರಣ ಫಲಕವನ್ನು ಒಳಗೊಂಡಿರುತ್ತದೆ. ಇದಕ್ಕಾಗಿ 2021 ರಲ್ಲಿ ಜನವರಿಯಿಂದ ಡಿಸೆಂಬರ್‌ವರೆಗಿನ ಅವಧಿಯಲ್ಲಿ ಪ್ರಕಟವಾದ ಮಹಿಳಾ ವೈದ್ಯರು ರಚಿಸಿದ ಆರೋಗ್ಯ, ಕಥಾಸಂಚಲನ, ಕಾದಂಬರಿ, ಪ್ರವಾಸ ಕಥನಗಳ ಎರಡು ಕೃತಿಗಳನ್ನು ಕಳುಹಿಸಬೇಕು. ಕೃತಿಗಳನ್ನು ಕಳುಹಿಸಲು ಇದೇ ದಿನಾಂಕ 31 ಕೊನೆ ದಿನವಾಗಿರುತ್ತದೆ.

ಕೃತಿಗಳನ್ನು # 222, 2ನೇ ಇ ಕ್ರಾಸ್, 3 ನೇ ಬ್ಲಾಕ್, 3 ನೇ ಸ್ಟೇಜ್, ಬಸವೇಶ್ವರ ನಗರ, ಬೆಂಗಳೂರು-560079 ಇವರಿಗೆ ಕಳುಹಿಸಬೇಕು ಎಂದು ಬಳಗದ ಸಂಚಾಲಕರೂ ಆಗಿರುವ ಹಿರಿಯ ಸಾಹಿತಿ ಡಾ. ವಸುಂಧರಾ ಭೂಪತಿ ತಿಳಿಸಿದ್ದಾರೆ.

## ಜಿಎಂಐಟಿ: ಬಯೋಟೆಕ್ನಾಲಜಿ ವಿಭಾಗಕ್ಕೆ ಎರಡು ರ್‍ಯಾಂಕ್‌ಗಳು





ದಾವಣಗೆರೆ, ಮಾ. 9- ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿ ಶ್ವ ವಿ ದ್ಯಾ ಲ ಯ ಹೊರಡಿಸಿರುವ 2020-21ರ ಶೈಕ್ಷಣಿಕ ಸಾಲಿನ ರ್‍ಯಾಂಕ್ ಪಟ್ಟಿಯಲ್ಲಿ ನಗರದ ಜಿಎಂ ತಾಂತ್ರಿಕ ಮಹಾವಿದ್ಯಾಲಯದ ಬಯೋಟೆಕ್ನಾಲಜಿ ವಿಭಾಗಕ್ಕೆ ಎರಡು ರ್‍ಯಾಂಕ್‌ಗಳು ಲಭಿಸಿವೆ.

ಬಯೋಟೆಕ್ನಾಲಜಿ ಇಂಜಿನಿಯರಿಂಗ್ ವಿಭಾಗದಿಂದ ಜಿ. ಮೊನಿಷಾ ಮೊದಲನೇ ರ್‍ಯಾಂಕ್ ಮತ್ತು ಆರ್. ಧನ್ಯಶ್ರೀ ಐದನೇ ರ್‍ಯಾಂಕ್ ಗಳಿಸಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ. ವೈ. ವಿಜಯಕುಮಾರ್ ತಿಳಿಸಿದ್ದಾರೆ. ಜಿ. ಮೊನಿಷಾ ಮೊದಲನೇ ರ್‍ಯಾಂಕ್ ಜೊತೆಗೆ ವಿಟಿಯು ಗೋಲ್ಡ್ ಮೆಡಲ್ ಮತ್ತು ಎ.ಸಿ. ಜಯಣ್ಣ ಗೋಲ್ಡ್ ಮೆಡಲ್ ಪಡೆದಿರುತ್ತಾರೆ ಎಂದು ವಿಭಾಗದ ಮುಖ್ಯಸ್ಥ ಡಾ. ಕೆ.ಕೆ. ಪ್ರಕಾಶ್ ತಿಳಿಸಿದರು.

# ಉಕ್ರೇನ್‌ನಿಂದ ಸುರಕ್ಷಿತವಾಗಿ ಮರಳಿದ ಭಾನುವಳ್ಳಿಯ ಪ್ರವೀಣ್

ಮಲೇಬೆನ್ನೂರು, ಮಾ.9- ಉಕ್ರೇನ್ ದೇಶದ ಖಾರ್ಕೀವ್ ನಗರದಲ್ಲಿ ಸಿಲುಕಿಕೊಂಡಿದ್ದ ವೈದ್ಯಕೀಯ ವಿದ್ಯಾರ್ಥಿ ಪ್ರವೀಣ್ ಎಂಬಾತ ಬುಧವಾರ ಬೆಳಿಗ್ಗೆ ಸುರಕ್ಷಿತವಾಗಿ ಸ್ವಗ್ರಾಮ ಭಾನುವಳ್ಳಿಗೆ ಆಗಮಿಸಿದ್ದಾನೆ.

ಪ್ರವೀಣ್, ಕಳೆದ ವರ್ಷ ಡಿಸೆಂಬರ್‌ನಲ್ಲಿ ವೈದ್ಯಕೀಯ ಶಿಕ್ಷಣಕ್ಕಾಗಿ ಉಕ್ರೇನ್ ದೇಶದ ಖಾರ್ಕೀವ್ ಮೆಡಿಕಲ್ ವಿಶ್ವವಿದ್ಯಾಲಯಕ್ಕೆ ಪ್ರವೇಶ ಪಡೆದಿದ್ದರು.

ಫೆಬ್ರವರಿ 24 ರಿಂದ ಉಕ್ರೇನ್ - ರಷ್ಯಾ ನಡುವೆ ಯುದ್ಧ ಆರಂಭವಾಯಿತು. ಫೆ.24 ರಿಂದ ಮಾರ್ಚ್ 2 ರವರೆಗೂ ಖಾರ್ಕೀವ್ ನಗರದ ಬಂಕರ್‌ವೊಂದರಲ್ಲಿ ಎಲ್ಲಾ ವಿದ್ಯಾರ್ಥಿಗಳು ಆಶ್ರಯ ಪಡೆದಿದ್ದೇವು.

ಚಳಗೇರಿಯ ಮೃತ ನವೀನ್ ಕೂಡ ನಮ್ಮ ಸೀನಿಯರ್ ವಿದ್ಯಾರ್ಥಿ ಆಗಿದ್ದರು. ಅವರು ಶೆಲ್ ದಾಳಿಗೆ ಸಿಲುಕುವ ಎರಡು ದಿನಗಳ ಹಿಂದೆ ನನ್ನ ಜೊತೆ ಮಾತನಾಡಿದ್ದರೆಂದು ಪ್ರವೀಣ್ ಪತ್ರಕರ್ತರಿಗೆ ತಿಳಿಸಿದರು.



ನವೀನ್ ಅವರ ಸಾವು ನಮ್ಮೆಲ್ಲರಿಗೂ ಬಹಳ ದುಃಖ ಮತ್ತು ಭಯ ತಂದಿತ್ತು. ಮಾರ್ಚ್ 3 ರಂದು ನಾವು ಖಾರ್ಕೀವ್ ನಗರದಿಂದ ನಡೆದುಕೊಂಡೆ ಪೆಸೊಚಿನ್‌ಗೆ ಬಂದು, ಅಲ್ಲಿಂದ ಭಾರತೀಯ ರಾಯಭಾರಿ ಸಹಾಯದಿಂದ ರೋಮೇನಿಯಾ ತಲುಪಿದೆವು. ನಂತರ ನಮ್ಮನ್ನು ಬಸ್ ಮೂಲಕ ಸ್ಲೊವೇಕಿಯಾದ ಕೊಸೈಸ್ ವಿಮಾನ ನಿಲ್ದಾಣಕ್ಕೆ ತಂದು ಅಲ್ಲಿಂದ ವಿಮಾನದ ಮೂಲಕ ದೆಹಲಿಗೆ ಕರೆ ತರಲಾಯಿತು.

ಮಂಗಳವಾರ ಬೆಳಿಗ್ಗೆ ತಲುಪಿದ ನಮ್ಮನ್ನು ಕರ್ನಾಟಕ ಭವನಕ್ಕೆ ಕರೆದುಕೊಂಡು ಹೋಗಿ ಸ್ನಾನ, ತಿಂಡಿ ಮತ್ತು ಮಧ್ಯಾಹ್ನ ಊಟ ಮಾಡಿಸಿ, ರಾತ್ರಿ 10 ಗಂಟೆ ವೇಳೆಗೆ ಬೆಂಗಳೂರಿಗೆ ಕರೆ ತಂದರೆಂದು ಪ್ರವೀಣ್ ಮಾಹಿತಿ ನೀಡಿದರು.

ಬೆಂಗಳೂರು ವಿಮಾನ ನಿಲ್ದಾಣದಲ್ಲಿ ನನಗಾಗಿ ನನ್ನ ತಂದೆ-ತಾಯಿ ಕಾಯುತ್ತಿದ್ದರು. ಅವರ ಸೇರಿದ ಬಳಿಕ ಮರು ಹುಟ್ಟು ಪಡೆದಂತಾಯಿತೆಂದು ಪ್ರವೀಣ್ ಕಣ್ಣೀರಿಟ್ಟರು.

### ಮಲೇಬೆನ್ನೂರು

ಖಾರ್ಕೀವ್ ನಗರದಲ್ಲಿ ನಾವಿದ್ದ ಸಮೀಪದಲ್ಲೇ ಬಾಂಬ್ ದಾಳಿ ನಡೆಯುತ್ತಿತ್ತು. ನಾವು ತುಂಬಾ ಭಯದಲ್ಲಿದ್ದೆವು. ನಮ್ಮ ದೇಶದ ಸರ್ಕಾರ ನಮ್ಮನ್ನು ಕಾಪಾಡಿದೆ ಎಂದು ಪ್ರವೀಣ್ ಕೃತಜ್ಞತೆ ಸಲ್ಲಿಸಿದರು.

ಪ್ರವೀಣ್, ಭಾನುವಳ್ಳಿಯ ವೀರೇಶ್ ಮತ್ತು ಮಂಜುಳಾ ದಂಪತಿಯ ಪುತ್ರ.

**ಸ್ವಾಗತ :** ಉಕ್ರೇನ್‌ನಿಂದ ಸುರಕ್ಷಿತವಾಗಿ ವಾಪಾಸ್ಸಾದ ವೈದ್ಯಕೀಯ ಪ್ರವೀಣ್ ಅವರನ್ನು ಭಾನುವಳ್ಳಿ ಗ್ರಾ.ಪಂ. ಅಧ್ಯಕ್ಷರು, ಸದಸ್ಯರು, ಪಿಡಿಒ, ಸಿಬ್ಬಂದಿ ವರ್ಗದವರು, ಬಂಧು-ಮಿತ್ರರು ಹೂ ಮಾಲೆ ಹಾಕಿ ಸ್ವಾಗತಿಸಿ, ಸಿಹಿ ತಿನಿಸಿದರು.

ನಂತರ ಪ್ರವೀಣ್ ಮನೆಗೆ ಅವರ ಬಂಧು-ಮಿತ್ರರು ಆಗಮಿಸಿ, ಪ್ರವೀಣ್ ಜೊತೆ ಮಾತುಕತೆ ನಡೆಸಿದರು.

# ಉಕ್ಕಡಗಾತ್ರಿಯ ಶ್ರೀ ಅಜ್ಜಯ್ಯನ ಜಾತ್ರೆಗೆ ತೆರೆ



ಮಲೇಬೆನ್ನೂರು, ಮಾ. 9- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಕಳೆದ ಒಂದು ವಾರದಿಂದ ಜರುಗಿದ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಶಿವರಾತ್ರಿ ಜಾತ್ರಾ ಮಹೋತ್ಸವಕ್ಕೆ ಬುಧವಾರ ಬೆಳಿಗ್ಗೆ ಭಕ್ತರಿಗೆ ಫಳ್ಹಾರ ಹಂಚುವ ಮೂಲಕ ತೆರೆ ಎಳೆಯಲಾಯಿತು. ಬೆಳಿಗ್ಗೆ ಅಜ್ಜಯ್ಯನ ಗದ್ದುಗೆಗೆ ಹಾಗೂ ಫಳ್ಹಾರದ ರಾಶಿಗೆ ವಿಶೇಷ ಪೂಜೆ ಸಲ್ಲಿಸಿದ ನಂತರ ಗದ್ದುಗೆ ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಸುರೇಶ್ ಹಾಗೂ ಟ್ರಸ್ಟ್ ಸದಸ್ಯರು ಭಕ್ತರಿಗೆ ಫಳ್ಹಾರ ಹಂಚುವುದಕ್ಕೆ ಚಾಲನೆ ನೀಡಿದರು. ನಂತರ ಸಾವಿರಾರು ಭಕ್ತರು ಸರದಿ ಸಾಲಿನಲ್ಲಿ ನಿಂತು ಫಳ್ಹಾರ ಸ್ವೀಕರಿಸಿದರು. ಪೊಲೀಸರು ಭದ್ರತೆ ಒದಗಿಸಿದ್ದರು.

# ಶ್ರೀಗಳ ಧರಣಿ ಸತ್ಯಾಗ್ರಹಕ್ಕೆ ಎಸ್ಸೆಸ್ ಬೆಂಬಲ



(1ನೇ ಪುಟದಿಂದ) ಒತ್ತಾಯಿಸಿದರಲ್ಲದೇ, ನಮ್ಮ ಮತ್ತು ನಮ್ಮ ಸಮಾಜದ ಸಂಪೂರ್ಣ ಬೆಂಬಲ ಶ್ರೀಗಳ ಹೋರಾಟಕ್ಕಿದೆ ಎಂದು ಹೇಳುವುದರೊಂದಿಗೆ ಸ್ವಾಮೀಜಿಯವರ ಹೋರಾಟಕ್ಕೆ ಬಲ ನೀಡಿದರು.

ನಂತರ ಮಾತನಾಡಿದ ವಾಲ್ಮೀಕಿ ಶ್ರೀಗಳು, ನಮ್ಮ ಅಜ್ಜ (ಎಸ್ಸೆಸ್) ನವರು ಇಲ್ಲಿಗೆ ಬಂದು ಬೆಂಬಲ ನೀಡಿದ್ದಾರೆಂದರೆ ಸರ್ಕಾರ ಕಣ್ಣು ತೆರೆಸುವ ವಿಶ್ವಾಸ ತಮಗಿದೆ ಎಂದರಲ್ಲದೇ, ಎಸ್ಸೆಸ್ ಅವರು ದೈತ್ಯ ಶಕ್ತಿ ಇದ್ದಂತೆ. ಅವರ ಧ್ವನಿಗೆ ಮೋದಿ ಕೂಡಾ ಕಣ್ಣು ತೆರೆಸುತ್ತಾರೆ ಎಂದು ಎಸ್ಸೆಸ್ ಅವರ ಶಕ್ತಿಯನ್ನು ಬಣ್ಣಿಸಿದರು.

ದಾವಣಗೆರೆ ಮಹಾನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಸವಿತಾ ಗಣೇಶ್ ಹುಲ್ಲಮನೆ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಯುವ ಕಾಂಗ್ರೆಸ್ ಮುಖಂಡ ಗಣೇಶ್ ಹುಲ್ಲುಮನೆ ಮತ್ತಿತರರು ಎಸ್ಸೆಸ್ ಅವರೊಂದಿಗಿದ್ದರು.

# 17 ರಂದು ಜನಸ್ಪಂದನ ಸಭೆ

ದಾವಣಗೆರೆ, ಮಾ. 9- ಕೋವಿಡ್ ಕಾರಣದಿಂದ ಸ್ಥಗಿತಗೊಂಡಿದ್ದ ಜನಸ್ಪಂದನ ಸಭೆಯನ್ನು ಪುನರಾರಂಭಿಸಲಾಗುವುದೆಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದ್ದಾರೆ. ಇದೇ ದಿನಾಂಕ 17ರ ಗುರುವಾರ ಜಿಲ್ಲಾಡಳಿತ ಭವನದಲ್ಲಿ ಜನಸ್ಪಂದನ ಸಭೆಯನ್ನು ಹಮ್ಮಿಕೊಳ್ಳಲಾಗಿದ್ದು, ಪ್ರತಿವಾರಕ್ಕೆ ಬದಲಾಗಿ ಪ್ರತಿ 15 ದಿನಗಳಿಗೊಮ್ಮೆ ಜನಸ್ಪಂದನ ಸಭೆ ನಡೆಯಲಿದೆ. ಸಾರ್ವಜನಿಕರ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ದೊರೆಯುತ್ತಿರುವ ಹಿನ್ನೆಲೆಯಲ್ಲಿ ಜನಸ್ಪಂದನ ಸಭೆ ಮತ್ತೆ ಆರಂಭಿಸಲಾಗುತ್ತಿದ್ದು, ಈ ತಿಂಗಳ 17 ಹಾಗೂ 31 ರಂದು ಜರುಗಲಿದೆ ಎಂದರು.


**ಬೇಕಾಗಿದ್ದಾರೆ**

ಬಟ್ಟೆ ಅಂಗಡಿಯಲ್ಲಿ ಚೂಡಿ ಕೌಂಟರ್ ಮತ್ತು ಸ್ಯಾರಿ ಕೌಂಟರ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್/ಗರ್ಲ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ :

**ರವಿತೇಜ ಟೆಕ್ಸ್‌ಟೈಲ್ಸ್**
**ಮೊ. 89703 23033**
**ದಾವಣಗೆರೆ.**


# ದೂಡಾ ಅಧ್ಯಕ್ಷರಿಂದ ಪ್ರಗತಿಯ ಕಾಮಗಾರಿ ವೀಕ್ಷಣೆ



ದಾವಣಗೆರೆ, ಮಾ. 9- ಎಸ್.ಎಸ್.ಲೇಔಟ್ 'ಬಿ' ಬ್ಲಾಕ್ ನಲ್ಲಿ ನಡೆಯುತ್ತಿರುವ ಡಾಂಬರೀಕರಣದ ಕಾಮಗಾರಿಯನ್ನು ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದೇವರಮನೆ ಶಿವಕುಮಾರ್ ಅವರು ಇಂದು ಬೆಳಿಗ್ಗೆ ಪರಿಶೀಲಿಸಿದರು. ಗುಣಮಟ್ಟದ ಕಾಮಗಾರಿ ಮಾಡಲು ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಪ್ರಾಧಿಕಾರದ ಸಹಾಯಕ ಇಂಜಿನಿಯರ್ ಕೆ.ಟಿ. ಅಕ್ಷತಾ, ಎಸ್.ಎಸ್.ಬಡಾವಣೆಯ ನಾಗರಿಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ಕರಿಬಸಯ್ಯ ಉಪಸ್ಥಿತರಿದ್ದರು.


**ವಿಶ್ವ ಮೂತ್ರಪಿಂಡ ದಿವಸದ ಅಂಗವಾಗಿ, ತಜ್ಞ ವೈದ್ಯರಿಂದ**

**ಉಚಿತ ತಪಾಸಣೆ ಶಿಬಿರ**

ದಿನಾಂಕ : 10 ಮತ್ತು 11ನೇ ಮಾರ್ಚ್ 2022
ಸಮಯ : ಬೆ.10.00 ರಿಂದ ಮ.2.00 ಹಾಗೂ ಸಂಜೆ 6.30 ರಿಂದ 8.30ರ ವರೆಗೆ

ಸ್ಥಳ : ಚೇತನ ಸ್ಪೆಷಾಲಿಟಿ ಪಾಲಿಕ್ಲಿನಿಕ್
# 197, 3ನೇಮೇನ್, ವೀರೇಶ್ ಇ.ಎನ್.ಟಿ. ಆಸ್ಪತ್ರೆ ಎದುರು, ಪಿ.ಜೆ. ಬಡಾವಣೆ, ದಾವಣಗೆರೆ-577002

**ನೋಂದಣಿಗಾಗಿ ಸಂಪರ್ಕಿಸಿ : 73492 52524**

**ಡಾ|| ಪ್ರಮೋದ್ ಜಿ.ಆರ್.**
ಎಂ.ಬಿ.ಬಿ.ಎಸ್.,ಎಂ.ಡಿ.(ಜನರಲ್ ಮೆಡಿಸನ್)
ಡಿ.ಎಂ. (ನೆಫ್ರೋಲಜಿ, ಸೆಂಟ್ ಜಾನ್ಸ್, ಬೆಂಗಳೂರು)
ಕಿಡ್ನಿ ಮತ್ತು ಮೂತ್ರಪಿಂಡ ಕಸಿ ತಜ್ಞರು
ನೆಫ್ರೋಲಜಿ ವಿಭಾಗ, ಎಸ್.ಎಸ್.ಐ.ಎಂ.ಎಸ್., ದಾವಣಗೆರೆ.

World Kidney Day™

**ಸಾಮಾನ್ಯ ಕಿಡ್ನಿ ಸಮಸ್ಯೆಗಳು**

- ಕಾಲು ಮತ್ತು ಮುಖ ಬಾವು
- ಮೂತ್ರದ ಪ್ರಮಾಣ ಕಡಿಮೆಯಾಗುವುದು
- ರಕ್ತದ ಏರೊತ್ತಡ
- ಡಯಾಲಿಸಿಸ್ ಸಂಬಂಧಿತ ತೊಂದರೆಗಳು
- ಮೂತ್ರಪಿಂಡದ ಕಲ್ಲುಗಳು
- ಹಸಿವು ಕಡಿಮೆಯಾಗುವುದು
- ಪದೇ ಪದೇ ವಾಂತಿ
- ರಕ್ತ ಹೀನತೆ
- ದೇಹದ ಲವಣಾಂಶಗಳ ನ್ಯೂನತೆಗಳು
- ಅನುವಂಶಿಕ ಕಿಡ್ನಿ ಕಾಯಿಲೆಗಳು
- ಮೈ ತುರಿಕೆ, ಸುಸ್ತು ಮತ್ತು ಆಯಾಸ
- ಮೂತ್ರದಲ್ಲಿ ರಕ್ತ ಮತ್ತು ಪ್ರೋಟೀನ್‌ಸೋರುವಿಕೆ
- ಅನಿಯಂತ್ರಿಕ ಸಕ್ಕರೆ ಖಾಯಿಲೆ
- ಮೂತ್ರ ಮತ್ತು ಮೂತ್ರನಾಳದ ಸೋಂಕು
- ಮೂತ್ರಪಿಂಡ ಕಸಿ ಮಾಡುವುದು

**ಶಿಬಿರದಲ್ಲಿ ದೊರೆಯುವ ಸೇವೆಗಳು**

1. ಉಚಿತ ನೋಂದಣಿ ಹಾಗೂ ಸಲಹೆ
2. ಈ ಕೆಳಗಿನ ಪರೀಕ್ಷೆಗಳನ್ನು ಮೂಲ ದರಗಳಿಗಿಂತ 50% ರಿಯಾಯಿತಿ ದರದಲ್ಲಿ ಶಿವ ಹೈಟೆಕ್ ಡಯಾಗ್ನೋಸ್ಟಿಕ್ ಸೆಂಟರ್‌ನಲ್ಲಿ ಮಾಡಲಾಗುವುದು.

* ರ್‍ಯಾಂಡಮ್ ಬ್ಲಡ್‌ಶುಗರ್ * ಸೆರಮ್ ಕ್ರಿಯಾಟಿನ್ * ಹಿಮೋಗ್ಲೋಬಿನ್ * ಸೆರಮ್ ಪೊಟ್ಯಾಷಿಯಮ್ * ಯುರಿನ್ ರೂಟಿನ್

ತುರ್ತು ಸೇವೆಗಳಿಗಾಗಿ ಸಂಪರ್ಕಿಸಿ : ತುರ್ತು ಚಿಕಿತ್ಸಾ ವಿಭಾಗ, ಎಸ್.ಎಸ್.ಐ.ಎಂ.ಎಸ್. ಆಸ್ಪತ್ರೆ, ದಾವಣಗೆರೆ ಫೋ : 08192-266099





JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte